# ನಿಮ್ಮ ಮೊದಲ

# 40

# ದಿನಗಳು......

ಇಂಡಿಯನ್ ಚರ್ಚ್ ಆಫ್ ಕ್ರೈಸ್ಟ್

Scanned with CamScanner

# ಮುನ್ನುಡಿ

ಬಹುಶಃ ಈ ಮಾರ್ಗದರ್ಶಿ ಪುಸ್ತಕವು ನಿಮ್ಮ ಕ್ರಿಸ್ತನಲ್ಲಿನ ದೀಕ್ಷಾಸ್ನಾನದ ದಿನ
ದಂದು ಕೊಟ್ಟಿರಬಹುದು. ಹಾಗಿದ್ದರೆ, ಎರಡು ಮಾತಿಲ್ಲದೆ ಈ ದಿನವೂ ನಿಮ್ಮ ಜೀವ
ನದಲ್ಲಿಯೇ ಮಹತ್ವಪೂರ್ಣವಾದ ದಿನವಾಗಿದೆ. ಈ ದಿನದಂದೇ ನೀವು ಹುಟ್ಟಿದ್ದು;
ನೀವು ಕ್ರಿಸ್ತನನ್ನು ಅಂಗೀಕರಿಸಲು ಮಾಡಿದ ನಿರ್ಧಾರ ಆತನೊಂದಿಗೆ ದೀಕ್ಷಾಸ್ನಾನದ
ಮೂಲಕ ಸಾಯಲು ತೆಗೆದುಕೊಂಡ ತೀರ್ಮಾನ, ನಿಮ್ಮ ಜೀವನಕ್ಕೊಂದು ಹೊಸ
ತಿರುವನ್ನು ಕೊಟ್ಟಿದೆ. ದೇವರವಾಕ್ಯ ಕೊಲೊಸ್ಸೆ. 3 : 3 ರಲ್ಲಿ ಹೇಳುವಂತೆ........
ಯಾಕೆಂದರೆ ನೀವು ಸತ್ತಿದ್ದೀರಲ್ಲಾ, ನಿಮ್ಮ ಜೀವವು ಕ್ರಿಸ್ತನೊಂದಿಗೆ ದೇವರಲ್ಲಿ ಮರೆ
ಯಾಗಿಟ್ಟಿದೆ.

ನೀವು ಪ್ರಾರಂಭಿಸಲಿರುವಂತಹ 40 ದಿನದ ಓದುವ ಪುಸ್ತಕವು ಪ್ರತಿದಿನವು
ನಿಮ್ಮ ಜೀವನವು ದೇವರ ವಾಕ್ಯದ ಮೇಲೆ ನಿಂತಿರಲು ಮತ್ತು ನೀವು ಸ್ಥಿರಚಿತ್ತವನ್ನು
ಗಳಿಸಲು ಸಹಾಯಿಸುತ್ತದೆ. ಇದು ಮೊದಲೇ ಶಿಷ್ಯರಾದಂತಹವರಿಗೂ ಸಹ ತಮ್ಮ
ಜೀವಿತವನ್ನು ಹೊಸದಾಗಿ ಮಾಡಲು ಸಹಾಯಿಸುತ್ತದೆ. ಈ ದೇವರ ವಾಕ್ಯವನ್ನು
ಓದುತ್ತಿರುವಾಗ ಇದನ್ನು ಅರ್ಥ ಮಾಡಿಕೊಳ್ಳುವುದು ಮುಖ್ಯ ಎಂದು ನೀವು ತಿಳಿದು
ಕೊಳ್ಳಬೇಕು. ನೀವು ಶಕ್ತಿಯುತವಾದ ತಳಪಾಯವನ್ನು ಹಾಕಿದರೆ ಮುಂದಿನ ದಿನಗಳಲ್ಲಿ
ಅದು ನಿಮಗೆ ಸಹಾಯವಾಗುತ್ತದೆ.

ವಾಕ್ಯವನ್ನು ತಿಳಿದಿರುವುದು ಅತಿ ಮಹತ್ವವುಳ್ಳದು. ಅವುಗಳು ನಿಮ್ಮನ್ನು
ಸಕಲ ಸತ್ಕಾರ್ಯಗಳಿಗೆ ಸನ್ನದ್ಧ ಮಾಡುವವು (2 ತಿಮೊಥೆ. 3 : 17). ಯೇಸುವು
ವಾಕ್ಯಗಳಲ್ಲಿ ಆಳವಾಗಿ ಬೇರೂರಿದ್ದನು. ಕಷ್ಟಕಾಲಗಳಲ್ಲಿ ಅವುಗಳನ್ನು ಶಕ್ತಿಯುತ
ವಾಗಿ ಉಪಯೋಗಿಸಿದನು (ಮತ್ತಾಯ 4 : 1-11 ಮತ್ತು ಲೂಕ 4 : 1-13).
ಆತನ ಉದಾಹರಣೆಯೊಂದಿಗೆ, ನಾವು ಸಹ ಪ್ರತಿನಿತ್ಯದ ಜೀವನದಲ್ಲಿ ವಾಕ್ಯಗಳನ್ನು
ಉಪಯೋಗಿಸಬೇಕೆಂದು ಹೇಳಿದ್ದಾನೆ. ಯೇಸು ಹೇಳಿದೇನೆಂದರೆ, ಮನುಷ್ಯನು
ರೊಟ್ಟಿ ತಿಂದ ಮಾತ್ರಕ್ಕೆ ಬದುಕುವುದಿಲ್ಲ. ದೇವರ ಬಾಯಿಂದ ಹೊರಡುವ ಪ್ರತಿ
ಯೊಂದು ಮಾತಿನಿಂದಲೂ ಬದುಕುವನು ಎಂದು. ನಿನ್ನ ಪ್ರತಿನಿತ್ಯದ ಸತ್ಯವೇದ
ಪಠಣದಲ್ಲಿ ಯಾವುದೂ ಅಡ್ಡಿ ಬರದಂತೆ ಎಚ್ಚರವಹಿಸು. ನಿನ್ನ ಜೀವನವು ದೇವರ
ವಾಕ್ಯದ ಮೇಲೆ ಆಧಾರವಾಗಿರಲಿ.

ವಿನಂತಿ : ದಯವಿಟ್ಟು ನಿಮ್ಮ ಅನಿಸಿಕೆ, ಟೀಕೆ ಟಿಪ್ಪಣಿಗಳನ್ನು ನಮಗೆ ತಿಳಿಸಿರಿ.
ಅವುಗಳು ನಮ್ಮ ಮುಂದಿನ ಅನುವಾದಗಳಿಗೆ, ಮುದ್ರಣಗಳಿಗೆ ಸಹಾಯ
ವಾಗುವುದು.



Scanned with CamScanner

# ಬಹಳವಾಗಿ ಬೆಳೆಯುವುದಕ್ಕಾಗಿ

1 ಒಂದು ಪುಸ್ತಕವನ್ನು ಖರೀದಿಸಿ ನೀನು ಓದುತ್ತಿರುವಂತಹ ಈ ಪತ್ರದ ಒಂದು ಟಿಪ್ಪಣಿಯನ್ನು ಸಿದ್ಧಮಾಡು, ನಿನ್ನ ಉತ್ತರವನ್ನು ಅದರಲ್ಲಿ ಬರೆದಿಡು ಮತ್ತು ನಿನ್ನ ಅನಿಸಿಕೆಗಳು ಬಹಳ ಮುಖ್ಯವಾಗಿವೆ. ನೀನು ಈಗ ಎಷ್ಟು ಚೆನ್ನಾಗಿ ಕಲಿಯುತ್ತಿಯೋ ಅಷ್ಟು ಚೆನ್ನಾಗಿ ಮುಂದೆ ನೀನು ಅದನ್ನು ಇತರರೊಂದಿಗೆ ಹಂಚಿಕೊಳ್ಳಬಹುದು.

2. ನಿಮ್ಮ ಪಾಠವನ್ನು ಓದಲು ಒಂದು ನಿಯಮಿತ ಸ್ಥಳವನ್ನು ಗೊತ್ತು ಮಾಡಿ. ಇವೆರಡನ್ನು ಮಾಡಿದರೆ ಅಡ್ಡಿ, ಆತಂಕದಿಂದ ದೂರವಾಗಿ ಓದಲು ಸಮಯ ಸಿಕ್ಕುತ್ತದೆ. ಸಾಮಾನ್ಯ ಕಾಲಗಳಲ್ಲಿ ಬೆಳಗಿನ ಸಮಯವು ತುಂಬಾ ಉತ್ತಮವಾಗಿದೆ.

3. ಓದಿ ಮತ್ತು ಗೆರೆಗಳನ್ನು ಹಾಕಿ, ಹೇಗಾದರೂ ಪ್ರತಿಯೊಂದು ಈ ಪಾಠದಲ್ಲಿರುವ ವಾಕ್ಯಗಳನ್ನು ಗುರುತಿಸಿ ಓದಿರಿ. ಇದು ನಿಮಗೆ ವಾಕ್ಯಗಳು ಯೇಸುವಿನ ಶಿಷ್ಯರಿಗಿದ್ದಂತೆ ಎಲ್ಲಿದೆಯೆಂದು ತಿಳಿಯುತ್ತದೆ.

4. ಹಿರಿಯ ಶಿಷ್ಯರೊಂದಿಗೆ ಒಂದು ಉತ್ತಮ ಸಂಬಂಧವನ್ನು ಇಟ್ಟುಕೊಳ್ಳಿ, ಅವರ ಬೆಳವಣಿಗೆಯನ್ನು ನೀವು ಗಮನಿಸಬಹುದು. ನಿಮಗೆ ಸಿಕ್ಕಬಹುದಾದಂತಹ ಎಲ್ಲಾ ಸಹಾಯವನ್ನು ತೆಗೆದುಕೊಳ್ಳಿರಿ. ತಿದ್ದುಪಡಿ ಮತ್ತು ಮಾರ್ಗದರ್ಶನವನ್ನು ತೆಗೆದುಕೊಳ್ಳಲು ಉತ್ಸುಕರಾಗಿರಿ. ನೀವು ಕಲಿಯಲಿರುವ ಕಠಿಣ ಸಂಗತಿಗಳು ಮುಂದಿನ ಒಳ್ಳೆಯ ಜೀವಿತಕ್ಕೆ ಸಹಾಯಕವಾಗುವವು. ಇದು ನಿಮಗೆ ಎಲ್ಲಾ ತರದ ಒಳ್ಳೆಯದನ್ನು ಮಾಡಲಿ.

5. ಪ್ರತಿದಿನವೂ ಓದುವಾಗ, ಆಯಾ ದಿನದ ದಿನಾಂಕವನ್ನು ಬರೆಯಿರಿ. ಇದು ನಿಮಗೆ ಓದುತ್ತಿರುವ ವಿಷಯವನ್ನು ಗಮನದಲ್ಲಿಡಲು, ಗುರುತಿಸಲು ಸಹಾಯ ಮಾಡುತ್ತದೆ.

6. ಈ ಪಟ್ಟಿಗಳನ್ನು ಇಟ್ಟುಕೊಳ್ಳಿರಿ ಮತ್ತು ಅವು ನಿಮ್ಮ ಕ್ರಿಸ್ತೀಯ ಜೀವನದಲ್ಲಿ ಸಹಾಯ ಮಾಡುತ್ತವೆ. ನಿಮ್ಮ ಟಿಪ್ಪಣಿಗಳೇ ಬೆಲೆಯುಳ್ಳವುಗಳಾಗಿ ನಿಮಗೆ ಪ್ರೋತ್ಸಾಹ ಬೇಕಾದ ಸಮಯದಲ್ಲಿ ನಿಮಗೆ ಸಹಾಯವಾಗುತ್ತದೆ. ಇವುಗಳನ್ನು ನೀವು ಇತರರೊಡನೆಯೂ ಸಹ ಹಂಚಿಕೊಳ್ಳಬಹುದು.

ದೇವರು ನಿಮ್ಮನ್ನು ಹೇರಳವಾಗಿ ಆತನ ವಾಕ್ಯಗಳಿಂದ ಆಶೀರ್ವಾದಿಸಲಿ ಮತ್ತು ಈ ಸಮಯವು ನಿಮ್ಮನ್ನು ಯಾವಾಗಲೂ ದೇವರ ಹತ್ತಿರ ಕರೆತರಲಿ ಮತ್ತು ನೀವು ಇತರರನ್ನು ಸಹ ದೇವರ ಹತ್ತಿರಕ್ಕೆ ಕರೆತರಲು ಇದು ಸಹಾಯ ಮಾಡಲಿ.



Scanned with CamScan

## ದಿನ ಒಂದು : "ಪೂರ್ತಿಯಾಗಿ ರಕ್ಷಣೆ ಹೊಂದಿದ್ದು"

ದೀಕ್ಷಾಸ್ನಾನದ ಮೂಲಕ ದೇವರು ನಿಮಗೆ ಮಾಡಿದ ಕಾರ್ಯ ಅದ್ಭುತವಾಗಿದೆ.

**ಕೊಲೊಸ್ಸೆ 1 : 21-23**

1. ಈ ದಿನಕ್ಕಿಂತ ಮುಂಚೆ ದೇವರೊಂದಿಗೆ ನಿಮ್ಮ ಸಂಬಂಧ ಹೇಗಿತ್ತು? ದೇವರು ನಿಮಗೆ ಶತ್ರುವಾಗಲು ಏನು ಕಾರಣವಾಗಿತ್ತು?
2. ಪವಿತ್ರತೆ /ಪಾಪರಹಿತ/ನಿಂದಾರಹಿತ ಎಂಬುದರ ಅರ್ಥವೇನು?
3. ರಕ್ಷಣೆಯನ್ನು ಕಾಪಾಡಿಕೊಂಡಿರುವುದಕ್ಕೆ ಕಟ್ಟಳೆಯೇನು? (ವ. 23)

**1 ಯೋಹಾನ 3 : 1-4**

1. "ದೇವರ ಮಕ್ಕಳಾಗಿ" ನಿಮ್ಮ ವರ್ತನೆ ಹೇಗಿರಬೇಕು?
2. "ನಿಮ್ಮ ಪವಿತ್ರತೆ"ಯನ್ನು ಹೇಗೆ ಪ್ರಾರಂಭಿಸುತ್ತೀರಿ?

**ಇಬ್ರಿಯ 9 : 24-28, ಇಬ್ರಿಯ 10 : 19-23**

1. ಯೇಸು ನಿಮಗಾಗಿ ಏನು ತ್ಯಾಗ ಮಾಡಿದ್ದಾನೆ?
2. ಶುದ್ಧ ಹೃದಯದಿಂದ ನೀವು ದೇವರ ಹತ್ತಿರ ಹೇಗೆ ಬರಬಹುದು?

**ಕೀರ್ತನೆ 103 : 1-5**

1. ದೇವರು ನಿಮ್ಮ ಪಾಪವನ್ನು ಏನು ಮಾಡಿದ್ದಾನೆ? ದೇವರು ನಿಮಗೆ ಮಾಡಿರುವ ಇತರ ಉಪಕಾರಗಳನ್ನು ಬರೆಯಿರಿ. (ವ. 2)

ಅನ್ವಯ :

ನಿಮ್ಮನ್ನು ರಕ್ಷಿಸಿದ್ದಕ್ಕೋಸ್ಕರ ದೇವರಿಗೆ ಸ್ತೋತ್ರ ಹೇಳಿ ಮಹಿಮೆಯನ್ನು ಸಲ್ಲಿಸಿರಿ ದೇವರಿಗೆ ಕೃತಜ್ಞತಾ ಪ್ರಾರ್ಥನೆಯನ್ನು ಹೇಳಿರಿ.

Scanned with CamScanner

# ದಿನ ಎರಡು : "ಪರೀಕ್ಷಿಸಿದ್ದು ಮತ್ತು ಶೋಧಿಸಿದ್ದು"

ಮತ್ತಾಯ 3 : 16-4 : 11

1. ಯೇಸುವಿಗೆ ದೀಕ್ಷಾಸ್ನಾನದ ನಂತರ ಏನಾಯಿತು? ನಿಮ್ಮ ದೀಕ್ಷಾಸ್ನಾನದ ನಂತರ ನೀವು ಏನು ಎದುರು ನೋಡುತ್ತೀರಿ?

2. ಯೇಸು ದೇವರೊಂದಿಗೆ ಹೊಂದಿದ್ದ ಸಂಬಂಧವನ್ನು ಪ್ರಶ್ನಿಸಲು ಹೇಗೆ ಶೋಧನೆಗೆ ಒಳಗಾದನು?

3. ಸೈತಾನನು ನಿಮಗೆ ಯಾವ ರೀತಿಯ ಅನುಮಾನ/ಕೀಳರಿಮೆ/ಹೆದರಿಕೆಗಳಿಂದ ನಿಮ್ಮ ದೀಕ್ಷಾಸ್ನಾನದ ನಂತರ ಶೋಧಿಸುತ್ತಾನೆ?

4. ಶೋಧನೆಗಳೊಡನೆ ಹೋರಾಡಲು ಯೇಸು ಯಾವ ರೀತಿ ದೇವರ ವಾಕ್ಯವನ್ನು ಉಪಯೋಗಿಸಿದನು? ಸತ್ಯವೇದವು ಹೇಗೆ ಸೈತಾನನ ಸುಳ್ಳನ್ನು ತಿಳಿಸುತ್ತದೆ?

ಎಫೆಸ 6 : 10-18

1. ಸೈತಾನನು ನಿಮ್ಮ ವಿರುದ್ಧ ಯಾವ ಹಂಚಿಕೆಯನ್ನು ಹೂಡಿದ್ದಾನೆ?

2. ನೀವು ಶಕ್ತಿಯಿಂದಿರಲು ದೇವರು ಯಾವ ಆಯುಧವನ್ನು ನಿಮಗೆ ಕೊಟ್ಟಿದ್ದಾನೆ?

3. ಸೈತಾನನ ವಿರುದ್ಧ ನಮಗಿರುವ ಏಕ ಮಾತ್ರ "ಶಸ್ತ್ರ" ಯಾವುದು? (ವ. 17)

**ಅನ್ವಯ :**

ನೀನು ಶೋಧನೆಗೆ ಒಳಗಾಗುವದನ್ನು ತಿಳಿ, ನಿನ್ನ ಕಷ್ಟಗಳ ಬಗ್ಗೆ ಮನಬಿಚ್ಚಿ ಮಾತನಾಡು, ನಿನ್ನ ಶೋಧನೆಗಳ ಕುರಿತು ಇತರ ಕ್ರೈಸ್ತರೊಂದಿಗೆ ಮಾತನಾಡು.

Scanned with CamScanner

# ದಿನ ಮೂರು : "ಬೆಳೆಯುವ ಬೇರುಗಳು"

ಲೂಕ 8 : 13

1. ಬೇರುಗಳನ್ನು ಬೆಳೆಸದ ಹೊಸ ಶಿಷ್ಯರಿಗೆ ಏನಾಗುತ್ತದೆ?

ಅಪೊಸ್ತಲರ ಕೃತ್ಯಗಳು 2:41-47/ ಅಪೊಸ್ತಲರ ಕೃತ್ಯಗಳು 4:32-37

1. ಈ ಹೊಸ ಶಿಷ್ಯರು ನಂಬಿಗಸ್ತರಾಗಲು ಏನು ಸಹಾಯ ಮಾಡಿತು?
2. ಅವರು ಮನಸ್ಸಿಟ್ಟ ವಿಷಯದಲ್ಲಿ ನೀವು ಸಹ ಮನಸ್ಸಿಟ್ಟಿದ್ದೀರೋ? (ಅಪೊಸ್ತಲರ ಕೃತ್ಯಗಳು 2 : 42)
3. ದೇವರೊಂದಿಗೆ ನಿಮ್ಮ ಸಂಬಂಧ ಹೇಗೆ ಆಳವಾಗಿಸಬಹುದು?

ಥೆಸಲೊನಿಕ 1 : 2-10

1. ಆಳವಾದ ಮನವರಿಕೆ ಎಂದರೆ ಏನು ? ನೀವು ಹೇಗೆ ಆಳವಾದ ಮನವರಿಕೆಯನ್ನು ಹೊಂದಬಹುದು?
2. ಈ ರೀತಿಯಲ್ಲಿ ನೀವು ಯಾರನ್ನು ಅನುಸರಿಸುತ್ತೀರಿ?
3. ನೀವು ಇತರರಿಗೆ ಮಾದರಿಯಾಗಿದ್ದೀರೋ? ಹೇಗೆ?

ಅನ್ವಯ :

ನೀವು ಈ ವಾರದಲ್ಲಿ ಇತರ ಕ್ರೈಸ್ತರೊಂದಿಗೆ ಸಮಯವನ್ನು ಕಳೆದು ಅವರಿಂದ ಕಲಿತು ಅನುಸರಿಸಿರಿ.

Scanned with CamScanner

# ದಿನ ನಾಲ್ಕು : "ಪ್ರಾರ್ಥನೆ ಮಾಡುವುದನ್ನು ಕಲಿಯುವುದು"

ಲೂಕ 11 : 1-13

1. ನಾವು ಯಾಕೆ ಪ್ರಾರ್ಥನೆ ಮಾಡುವುದನ್ನು ಕಲಿಯಬೇಕು? ನೀವು ಯಾರಿಂದ ಕಲಿಯುತ್ತಿದ್ದೀರಿ?

2. (ವ.2-4) ನೀವು ದೇವರ ಹೆಸರನ್ನು ಹೇಗೆ ಸ್ತುತಿಸಬಹುದು? ನೀವು ದೇವರ ರಾಜ್ಯ (ಸಭೆ)ಗಾಗಿ ಪ್ರಾರ್ಥಿಸುತ್ತೀರೋ? ನೀವು ನಿಮ್ಮ ಪ್ರತಿನಿತ್ಯದ ಅಗತ್ಯಗಳಿಗಾಗಿ, ಪಾಪ ನಿವಾರಣೆಗಾಗಿ ಪ್ರಾರ್ಥಿಸುತ್ತಾ ಇದ್ದೀರೋ? ನಿಮ್ಮ ಶೋಧನೆಗಳಿಂದ ರಕ್ಷಿಸಲ್ಪಡುವದಕ್ಕಾಗಿ ಪ್ರಾರ್ಥಿಸುತ್ತೀರೋ?

3. ವಚನ 5-13 ರಿಂದ ಯೇಸು ಏನನ್ನು ಪ್ರಾರ್ಥಿಸಬೇಕೆಂದು ಇಚ್ಛಿಸುತ್ತಾನೆ?

ಪ್ರಾರ್ಥನೆಯ ಸರಳ ಪಟ್ಟಿ :

1) ಸ್ತುತಿಸುವುದು
2) ಪಾಪದ ಅರಿಕೆ
3) ಉಪಕಾರ ಸ್ತುತಿ
4) ವಿಜ್ಞಾಪನೆಗಳು

ನೀವು ಪ್ರತಿಯೊಂದನ್ನು ಹತ್ತು ನಿಮಿಷಗಳ ಕಾಲ ಮಾಡಿದರೆ 40 ನಿಮಿಷಗಳ ಶಕ್ತಿಯುತವಾದ ಪ್ರಾರ್ಥನೆಯನ್ನು ಮಾಡುವಿರಿ. ಕೀರ್ತನೆಗಳನ್ನು ಓದಿ ಪ್ರಾರ್ಥನೆ ಮಾಡುವುದನ್ನು ಕಲಿಯಿರಿ.

ಫಿಲಿಪ್ಪಿ 4 : 6-7

ದೇವರು ಏನನ್ನು ಪ್ರಾರ್ಥಿಸಬೇಕೆಂದು ಇಚ್ಛಿಸುತ್ತಾನೆ? ನೀವು ಮಾಡುವ ಕೆಲವು ಚಿಂತೆಗಳು ಯಾವುವು ? ನೀವು ಪ್ರಾರ್ಥನೆ ಮಾಡಿದಾಗ ಶಾಂತಿ ಸಿಕ್ಕುತ್ತದೋ? ದೇವರನ್ನು ನಂಬಿರಿ ಆತನು ಉತ್ತರಿಸುತ್ತಾನೆ.

ಅನ್ವಯ :

ದೇವರು ಕಲಿಸಿಕೊಟ್ಟ ರೀತಿಯಲ್ಲಿ ಅಥವಾ ಮೇಲೆ ಹೇಳಿದ ರೀತಿಯಲ್ಲಿ ಪ್ರಾರ್ಥಿಸಿರಿ. ನೀವು ಪ್ರಾರ್ಥನಾ ಪಟ್ಟಿಯನ್ನು ತಯಾರಿಸಿ ದೇವರು ಹೇಗೆ ಆಶೀರ್ವದಿಸಿದ್ದಾನೆ ಎಂಬುದನ್ನು ತಿಳಿಯಿರಿ.

Scanned with CamScanner

# ದಿನ ಐದು : "ದೇವರ ಕೃಪೆ"

ರೋಮಾ 5 : 6-11

1. ನಮಗಾಗಿ ಕ್ರಿಸ್ತನು ಮರಣ ಹೊಂದಿದಾಗ ನಮ್ಮ ಬಲಹೀನತೆ ಏನಾಗಿತ್ತು?

2. ದೇವರ ಅಪ್ರತಿಮ ಪ್ರೀತಿಯು ನಿಮಗೆ ಏನನ್ನು ಸಿದ್ಧಾಂತ ಪಡಿಸುತ್ತದೆ?

ತೀತ 3 : 3-8, 2 : 11-14

1. ನಾವು ಹಳೆಯ ಜೀವಿತವನ್ನು ಏಕೆ ನೆನಪಿಸಿಕೊಳ್ಳಬೇಕು?

2. ದೇವರ ಕ್ಷಮಾಪಣೆಯನ್ನು ಗಳಿಸಲು ನೀನು ಏನು ಮಾಡಿದ್ದಿ?

3. ದೇವರ ಕರುಣೆಗೆ ಹೇಗೆ ನೀನು ಉತ್ತರಿಸಿದ್ದಿ?

4. ನೀನು ಹೇಗೆ ನಿನ್ನ ಮನಸ್ಸನ್ನು ಹಿಡಿತದಲ್ಲಿ ಇಟ್ಟುಕೊಂಡು ದೇವರಿಗೆ ಸತ್ಕಾರ್ಯವನ್ನು ಮಾಡುತ್ತಿ?

1 ಕೊರಿಂಥ 15 : 9-10, 1 ತಿಮೊಥೆ 1 : 7-12

ಪೌಲನು ದೇವರಿಗೆ ಹೇಗೆ ಪ್ರತ್ಯುಪಕಾರವನ್ನು ತೋರಿಸಿದನು?

ಅನ್ವಯ :

ನೀನು ರಕ್ಷಣೆ ಹೊಂದಿದ್ದಕ್ಕಾಗಿ ದೇವರಿಗೆ ಕೃತಜ್ಞತೆಯಿಂದಿರುವ 3 ಸಂಗತಿಗಳನ್ನು ಬರೆ.

Scanned with CamScanner

# ದಿನ ಆರು : "ಕೈ ಕೊಳ್ಳಲು ಅತೀ ಉತ್ತಮವಾಗಿದೆ"

2 ಅರಸುಗಳು 7 : 3-11

1. ದೀಕ್ಷಾಸ್ನಾನಕ್ಕಿಂತ ಮುಂಚೆ ಆ ನಾಲ್ಕು ಕುಷ್ಠರೋಗಿಗಳ ಹಾಗೆ ನೀವು ಹೇಗೆ ಬಳಲುತ್ತಿದ್ದಿ?
2. ದೇವರ ರಾಜ್ಯ ಹೇಗೆ ಅಡೆತಡೆಗಳಿಲ್ಲದ ಔತಣದಂತಿದೆ?
3. 9ನೇ ವಚನ ಶಿಷ್ಯರಾದ ನಿಮಗೆ ಹೇಗೆ ಬಳಕೆಯಾಗುತ್ತದೆ? ನಿಮಗೆ ಅದೇ ತರಹ ಅನಿಸಿಕೆ ಇದೆಯೋ?

ರೋಮಾ 10 : 1-4, 14-21

1. ರಕ್ಷಣೆ ಹೊಂದದವರಿಗೆ ಪೌಲನು ಕಾಳಜಿ ವಹಿಸುತ್ತಾನೋ?
2. ದೇವರು ಪ್ರಸಂಗಿಸಲು ಯಾರನ್ನು ಕಳುಹಿಸಿದನು?
3. ಎಲ್ಲರೂ ಶುಭಸಂದೇಶವನ್ನು ಅನುಸರಿಸುತ್ತಾರೋ? ಯಾಕೆ?
4. ಯಾರು ಏನೇ ಹೇಳಿದರೂ ನಾವು ಯಾಕೆ ಪ್ರಸಂಗಿಸಬೇಕು?

ಕೀರ್ತನೆಗಳು 116 : 1-4

ದೇವರು ಮಾಡಿರುವ ಪ್ರತ್ಯುಪಕಾರಗಳನ್ನು ನಾವು ಹೇಗೆ ತಿರುಗಿ ಕೊಡಬಹುದು.

ಅನ್ವಯ :

ನೀವು ನಂಬಿಕೆಯಿಂದ ಸುವಾರ್ತೆ ಸಾರಲು ಈ ದಿನ ಒಂದು ಗುರಿಯನ್ನು ಇಡಿರಿ. ಅಸಂತೋಷದಿಂದಿರಲು ನಿರಾಕರಿಸಿರಿ.

Scanned with CamScan

# ದಿನ ಏಳು : "ದೇವರ ಕುಟುಂಬ"

**ಮಾರ್ಕ 3 : 31-33**

1. ಯೇಸು ಯಾಕೆ ತನ್ನ ದೈಹಿಕ ಕುಟುಂಬವನ್ನು ಮತ್ತು ಆತ್ಮಿಕ ಕುಟುಂಬವನ್ನು ಆರಿಸಬೇಕಾಯಿತು?

2. ನಿಮಗೆ ಹತ್ತಿರವಾದ ಜನರು ಯಾರು? ನೀವು ಏನು ಆಯ್ಕೆ ಮಾಡುವಿರಿ? ದೇವರ ಜನರು ನಿಜವಾಗಿಯು ನಿಮ್ಮ ಸ್ವಂತ ಜನರೋ?

**1 ಪೇತ್ರ 1 : 22**

1. ನಿಷ್ಕಳಂಕ ಪ್ರೀತಿ ಯಾವುದು ? ನಿಮ್ಮ ಹೃದಯದಿಂದ ನೀವು ಆಳವಾಗಿ ಹೇಗೆ ಪ್ರೀತಿ ಮಾಡಬಹುದು?

2. ನೀವು ಈ ರೀತಿ ಯಾರನ್ನಾದರು ಪ್ರೀತಿ ಮಾಡಿದ್ದೀರೋ? ನಿಮ್ಮ ಅನುಯಾಯಿಗಳು ಬೆಳೆಯಲು ನೀವು ಹೇಗೆ ಪ್ರೀತಿಸಬೇಕು?

**2 ಕೊರಿಂಥ 5 : 16-17**

1. ನೀವು ಜನರನ್ನು ಲೌಕಿಕವಾಗಿ ಯಾವ ದೃಷ್ಟಿಯಿಂದ ನೋಡಿದ್ದೀರಿ?

2. ಜನರನ್ನು ನೋಡುವ ನಿಮ್ಮ ದೃಷ್ಟಿ ಯಾವ ರೀತಿಯಲ್ಲಿ ಬದಲಾಗಬೇಕು?

**1 ತಿಮೊಥೆ 5 : 1-12**

ನಿಮ್ಮ ಸಭೆಗಳಲ್ಲಿ ನಿಮಗೆ ಆತ್ಮಿಕವಾಗಿ ಯಾರು ನಿಮ್ಮ ತಂದೆ, ತಾಯಿ, ಸಹೋದರ, ಸಹೋದರಿಗಳಾಗಬಹುದು?

ಅನ್ವಯ :

ನಿಮ್ಮ ಮನೆ ಸಭೆಗಳಲ್ಲಿ ಈ ವಾರ ಇಬ್ಬರು ಶಿಷ್ಯರೊಡನೆ ಸಮಯ ಕಳೆಯಲು ನಿರ್ಧರಿಸಿ; ಇಲ್ಲಿಯವರೆಗೆ ಸಂಧಿಸದಿದ್ದವರೊಂದಿಗೆ.

Scanned with CamScanner

## ದಿನ ಎಂಟು : "ಮಹಿಮೆಯ ನಂಬಿಕೆ"

1 ಕೊರಿಂಥ 15 : 19

1. ಈ ಲೌಕಿಕವಾದ ಜೀವನಕ್ಕಿಂತ ಕ್ರಿಸ್ತನಲ್ಲಿನ ನಮ್ಮ ನಂಬಿಕೆ ಯಾಕೆ ಬಹಳ ವಾಗಿದೆ?

2. ನಿತ್ಯ ಜೀವವಿರದ ಪಕ್ಷದಲ್ಲಿ ಕ್ರೈಸ್ತರಾಗಿ ನಾವು ಯಾಕೆ ದುಃಖಿಸಬೇಕು?

**1 ಕೊರಿಂಥ 15 : 42-58**

1. ಪೌಲನು ನಮಗೆ ಹೇಳುವ ರಹಸ್ಯವೇನು (ವ. 51) ?

2. ನಾವು ಸಾಮಾನ್ಯವಾಗಿ ಯಾಕೆ ಸಾವಿಗೆ ಹೆದರುತ್ತೇವೆ ? ನಾನು ಇನ್ನು ಮೇಲೆ ಯಾಕೆ ಧೈರ್ಯದಿಂದ ಇರಬೇಕು?

3. ನಾವು ಹೇಗೆ ದೇವರಿಗಾಗಿ ಕೆಲಸ ಮಾಡಬೇಕು? ನಾವು ಪೂರ್ತಿಯಾಗಿ ಆತನಿಗೆ ಒಪ್ಪಿಸಿ ಕೊಟ್ಟಾಗ ಏನಾಗುತ್ತದೆ?

**ಕೊಲೊಸ್ಸೆ 3 : 1-4**

1. ನೀವು ದೇವರೊಂದಿಗೆ ಯಾವಾಗ ಎಬ್ಬಿಸಲ್ಪಟ್ಟಿರಿ?

2. ನೀವು ಈಗಿನಿಂದ ಏನನ್ನು ಚಿಂತಿಸುತ್ತೀರಿ?

3. ನೀವು ಯಾವ ವಿಷಯದ ಬಗ್ಗೆ ಚಿಂತಿಸುವುದನ್ನು ಬಿಡಬೇಕು?

**ಅನ್ವಯ :**

ನೀವು ಒಂದು ನಿಮಿಷ ಸ್ವರ್ಗ ಹೇಗಿರುತ್ತದೆ ಎಂಬುದಾಗಿ ಚಿಂತಿಸಿರಿ, ನೀವು ಪ್ರತಿ ದಿನವೂ ಸಹ ದೇವರು ನಿಮಗೆ ಕೊಟ್ಟಿರುವಂತ ಈ ಅವಕಾಶಕ್ಕಾಗಿ ಕೃತಜ್ಞರಾಗಿರುವುದನ್ನು ಮರೆಯಬೇಡಿ.

Scanned with CamScanner

# ದಿನ ಒಂಬತ್ತು : "ಅನೇಕ ವಿಧವಾದ ಪರೀಕ್ಷೆಗಳು"

ಯಾಕೋಬ 1 : 2-8

1. ದೇವರು ಯಾಕೆ ಅನೇಕ ವಿಧವಾದ ಪರೀಕ್ಷೆಗಳಿಗೆ ನಮ್ಮನ್ನು ಒಳಪಡಿಸುತ್ತಾನೆ?

2. ನಿಮ್ಮ ತೊಂದರೆಗಳ ಬಗ್ಗೆ ನೀವು ಹೇಗೆ ಚಿಂತಿಸುತ್ತೀರಿ?

3. ನಿಮ್ಮ ಜೀವನದಲ್ಲಿನ ಪರೀಕ್ಷೆಗಳಿಗೆ ನೀವು ಹೇಗೆ ಪ್ರತಿಕ್ರಿಯಿಸುತ್ತೀರಿ?

ಯಾಕೋಬ 1 : 12-15

1. ನೀವು ಹೇಗೆ ಶೋಧನೆಗೆ ಒಳಗಾಗಿ ಪರೀಕ್ಷೆಗಳಿಂದ ನಿಲ್ಲಬಹುದು?

2. ಶೋಧನೆಗಳು ಎಲ್ಲಿಂದ ಬರುತ್ತವೆ ? ಯಾವ ವಿಷಯಗಳು ನಿಮ್ಮನ್ನು ಶೋಧಿಸುತ್ತವೆ? ನೀವು ನಿಮ್ಮ ಶೋಧನೆಗಳನ್ನು ಇತರರೊಡನೆಯೂ, ದೇವರೊಡನೆಯೂ ಹೇಳಿದ್ದೀರೋ?

1 ಪೇತ್ರ 1 : 3-9

1. ನಮ್ಮ ಶೋಧನೆಗಳಲ್ಲಿ ನಾವು ಯಾಕೆ ಸಂತೋಷಗೊಳ್ಳಬೇಕು?

2. ನಿಮ್ಮ ನಂಬಿಕೆಯು ಶುದ್ಧವಾಗಿದೆಯೋ ಇಲ್ಲವೋ ಎಂದು ಹೇಗೆ ಗೊತ್ತಾಗುತ್ತದೆ?

3. ನಿಮ್ಮ ಜೀವನದಲ್ಲಿ ಬರುವ ಪರೀಕ್ಷೆಗಳ ಪಟ್ಟಿಯನ್ನು ಬರೆಯಿರಿ (ಹಣಕಾಸಿನ ವಿಷಯವಾಗಲಿ, ಸಂಬಂಧಗಳ ವಿಷಯವಾಗಲಿ, ಹಿಂಸೆ ಇತ್ಯಾದಿ). ಮುಂಬರುವ ಶೋಧನೆಗಳಿಗೆ ಈ ದಿನ ಹೇಗೆ ನೀವು ಸಿದ್ಧರಾಗಬಹುದು?

ಅನ್ವಯ :

ನಿಮ್ಮ ಜೀವನದಲ್ಲಿ ಬರುವ ಪರೀಕ್ಷೆ ಮತ್ತು ಶೋಧನೆಗಳ ಬಗ್ಗೆ ಇತರರಿಗೆ ಹೇಳಿ, ನಿಮ್ಮ ಅನಿಸಿಕೆಗಳನ್ನು ಹೇಳಿ ನಿಮ್ಮ ಜೀವನದಲ್ಲಿ ಸಂತೋಷದಿಂದ ಇರಿ.

Scanned with CamScanner

## ದಿನ ಹತ್ತು : "ಯೇಸುವಿನ ಹಾಗೆ ಪ್ರಾರ್ಥಿಸುವುದು"

**ಮಾರ್ಕ 1 : 32-39**

1. ಯೇಸು ಪ್ರಾರ್ಥಿಸಲಿಕ್ಕಾಗಿ ಯಾವ ತ್ಯಾಗವನ್ನು ಮಾಡಿದನು? ಆತನ ಒಂದಿನ ದಿನದ ಬಗ್ಗೆ ಚಿಂತಿಸಿರಿ, ಆತನು ಪ್ರಾರ್ಥನೆ ಮಾಡದಿರಲು ಯಾವ ನೆಪವನ್ನು ಹೇಳಿರಬಹುದಿತ್ತು?

2. ನಿಮಗೆ ಪ್ರಾರ್ಥನೆ ಮಾಡಬೇಕೆಂದು ಯಾವಾಗ ಅನಿಸುತ್ತದೆ? ನೀವು ಯಾವಾಗಲಾದರೂ ಪ್ರಾರ್ಥನೆ ಮಾಡದಿರಲು ನೆಪವನ್ನು ಒಡ್ಡಿದ್ದೀರೋ?

**ಇಬ್ರಿಯ 5 : 7-10**

1. ಯೇಸುವಿಗೆ ಯಾವ ರೀತಿಯ ಪ್ರಾರ್ಥನಾ ಜೀವಿತ ಇತ್ತು?
2. ಯೇಸುವಿಗೆ ಶಿಲುಬೆಗೆ ಹೋಗುವ ಬದಲಾಗಿ ಯಾರ ವಿಷಯ ಅನುಸರಿಸಲು ಕಷ್ಟವಾಗಿತ್ತು?
3. ನೀವು ಕ್ರೈಸ್ತರಾಗಿ ಮಾಡಲು ಕಷ್ಟವಾದ ಕೆಲಸ ಯಾವುದು?
4. ನೀವು ಗಟ್ಟಿಯಾದ ಕೂಗಿನಿಂದಲೂ, ಕಣ್ಣೀರಿನಿಂದಲೂ ದೇವರಿಗೆ ವಿಧೇಯರಾಗಿರಲು ಪ್ರಾರ್ಥಿಸುತ್ತಿದ್ದೀರೋ?
5. ನಿಮ್ಮ ಜೀವನದಲ್ಲಿ ಯಾವ ವಿಷಯವಾಗಿ ಪ್ರಾರ್ಥಿಸಬೇಕು? ಪ್ರಾರ್ಥನಾ ಪಟ್ಟಿಯನ್ನು ಸಿದ್ಧಮಾಡಿರಿ.

**ಅನ್ವಯ :**

ನೀವು ಬರೆದಂತಹ ವಿಷಯದಲ್ಲಿ ಸಮಯವನ್ನು ಕಳೆಯಿರಿ. ನಿಮ್ಮ ಪ್ರಾರ್ಥನೆಯು ನಿರ್ದಿಷ್ಟವಾಗಿರಲಿ. ನೀವು ಮಹಾ ಶಬ್ದದಿಂದ ದೇವರೊಂದಿಗೆ ಪ್ರಾರ್ಥಿಸಿರಿ. ನಿಮಗೆ ಅನ್ನಿಸುವ ವಿಷಯಗಳ ಬಗ್ಗೆ ಬರೆಯಿರಿ. ಅವುಗಳು ಯಾಕೆ ನಿಮಗೆ ಕಷ್ಟ ಮತ್ತು ಅದನ್ನು ಹೇಗೆ ಬದಲಾಯಿಸಬಹುದು.

ಕಳೆದ ಹತ್ತು ದಿನಗಳ ಅನ್ವಯವನ್ನು ಪುನರಾವರ್ತಿಸಿರಿ.
"ನೀವು ಅವುಗಳನ್ನು ನಿಮ್ಮ ಜೀವನದಲ್ಲಿ ಅಳವಡಿಸಿಕೊಂಡಿದ್ದೀರೋ?"

Scanned with CamScanner

## ದಿನ ಹನ್ನೊಂದು :

# "ಸತ್ಯವನ್ನು ಹಿಡಿದಿಟ್ಟುಕೊಳ್ಳುವುದು"

**2 ತಿಮೊಥೆ 2 : 4-19**

1. ಕೆಲವು ಜನರು ತಮ್ಮ ಅನಿಸಿಕೆಗಳು ಹಬ್ಬಿಸಲು ಯಾಕೆ ಜಗಳವಾಡುತ್ತಾರೆ ? ನೀವು ನಿಮ್ಮ ಮಾತಿಗೋಸ್ಕರ ಜಗಳವಾಡಿದ್ದೀರೋ? ನೀವು ಈ ಕುರಿತಾಗಿ ಬೇರೆ ಶಿಷ್ಯನೊಟ್ಟಿಗೆ ಮಾತನಾಡಿದ್ದೀರೋ?
2. ನೀವು ದೇವರಿಂದ ಮೆಚ್ಚಿಗೆ ಪಡೆಯಲು ಹೇಗೆ ತರಬೇತುಗೊಳಿಸಬಹುದು?
3. ದೇವರು ವಿಷಯದ ಬಗ್ಗೆ ನೀವು ಚರ್ಚಿಸಿದ್ದೀರೋ?ಅರ್ಥಹೀನ ನಿರರ್ಥಕ ಮಾತನ್ನು ಹೇಗೆ ತಡೆಗಟ್ಟಬಹುದು?

**1 ತಿಮೊಥೆ 1 : 18-20**

1. ನೀವು ಹೇಗೆ ಒಳ್ಳೆಯ ಯುದ್ಧವನ್ನು ಮಾಡಬಹುದು?
2. ಹೇಗೆ ಶಿಷ್ಯರ ನಂಬಿಕೆಯು ಒಡೆದ ಹಡಗಿನಂತಾಗುತ್ತದೆ?
3. ಹುಮನಾಯನನ್ನು ನೆನಪು ಮಾಡಿಕೊಳ್ಳಿರಿ( ತಿಮೊಥೆ 2: 17-18)ಮತ್ತು ಅಲೆಕ್ಸಾಂದ್ರನು(ತಿಮೊಥೆ 4: 14-15) ನಂಬಿಕೆಯಿಂದ ದೂರಸರಿದವರ ಜೀವಿತ ಹೇಗಿರುತ್ತದೆ? ನೀವು ಇತರರಿಗೆ ಹೇಗೆ ಹಾನಿಯನ್ನುಂಟು ಮಾಡುತ್ತೀರಿ ?

**1 ತಿಮೊಥೆ 4 : 14-16**

1. ನಿಮ್ಮ ಜೀವನವನ್ನು ಪ್ರತಿದಿನ ಪರೀಕ್ಷಿಸುತ್ತಿದ್ದೀರೋ? (ಶಿಷ್ಯರಾಗಿ) ಮತ್ತು ನಿಮ್ಮ ಸಿದ್ಧಾಂತವನ್ನು ( ಸತ್ಯವೇದವನ್ನು ಅರ್ಥವಾಡಿಕೊಂಡು) ತಿಳಿದಿದ್ದೀರೋ ?
2. ನಿಮ್ಮಲ್ಲಿ ಆಗಿರುವ ಬದಲಾವಣೆಯನ್ನು ಇತರರು ಗುರುತಿಸಿದ್ದಾರೋ ?

**2. ತಿಮೊಥೆ 2 : 22-26**

ನಿಮ್ಮನ್ನು ವಿರೋಧಿಸುವವರ ಬಗ್ಗೆ ನಿಮ್ಮ ಅನಿಸಿಕೆ ಹೇಗಿರಬೇಕು ?

ಅನ್ವಯ :

ನಿಮಗೆ ಅರ್ಥವಾಗದಿರುವ ಸಭೆಗಳಲ್ಲಿನ ಸಂಗತಿಗಳ ಬಗ್ಗೆ ಅಥವಾ ಸತ್ಯವೇದದ ಸಿದ್ಧಾಂತದ ಬಗ್ಗೆ ನಿಮ್ಮನ್ನು ಶಿಷ್ಯನಾಗಿ ರೂಪಿಸುವವರ ಹತ್ತಿರ ಚರ್ಚಿಸಿ ಮಾತನಾಡಿರಿ.

Scanned with CamScanner

## ದಿನ ಹನ್ನೆರಡು :

# "ಒಳ್ಳೆಯ ಸಂಗತಿಗಳನ್ನು ಮಾಡುವದು"

ಎಫೆಸ 2 : 10

1. ದೇವರು ಯಾಕೆ ನಮ್ಮನ್ನು ಸೃಷ್ಟಿಸಿದನು ?
2. ನೀವು ಮಾಡಬಹುದಾದಂತೆ ಒಳ್ಳೆಯ ಸಂಗತಿಗಳ ಪಟ್ಟಿಯನ್ನು ಸಿದ್ಧಮಾಡಿರಿ.

1 ಪೇತ್ರ 4 : 8-11

1. ಪ್ರೀತಿಯು ಹೇಗೆ ಎಲ್ಲಾ ಪಾಪಗಳನ್ನು ಮುಚ್ಚುತ್ತದೆ ?
2. ಇತರ ಶಿಷ್ಯರಿಗೆ ನೀವು ಉಪಚಾರವನ್ನು ಮಾಡುತ್ತಿದ್ದೀರೋ ?
3. ಇದನ್ನು ನೀವು ಹೇಗೆ ಉತ್ತಮಪಡಿಸಿಕೊಳ್ಳಬಹುದು ?
4. ಯಾಕೆ ದೇವರು ಇತರರಿಗೆ ಕೊಡಬೇಕೆಂದು ಇಚ್ಛಿಸುತ್ತಾನೆ ?

ಗಲಾತ್ಯ 6 : 9-10

1. ನಾವು ಯಾರಿಗೆ ಸಹಾಯ ಮಾಡಬೇಕೆಂಬು ಇಚ್ಛಿಸುತ್ತಾನೆ ?
2. ಸತ್ಯವೇದವು ಯಾರಿಗೆ ಉಪಚಾರ ಮಾಡಬೇಕೆಂದು ತಿಳಿಸುತ್ತವೆ ?

ಅನ್ವಯ :

ನೀವು ಅಗತ್ಯವನ್ನು ನೋಡಿದರೆ ಸಹಾಯ ಮಾಡಿರಿ. ಈ ವಾರ ಇದನ್ನು ಮಾಡಿರಿ. ನಿಮಗೆ ಸಹಾಯ ಮಾಡುವುದು ಹೇಗೆ ಎಂದು ತಿಳಿಯದಿದ್ದರೆ ಕೇಳಿ. ನೆನಪಿನಲ್ಲಿಡಿ ನಮಗೆ ಒಬ್ಬರಿಗೊಬ್ಬರು ಬೇಕು. ನಾವು ಒಂದು ಕುಟುಂಬ ವಾಗಿದ್ದೇವೆ.

Scanned with CamScanner

## ದಿನ ಹದಿಮೂರು :

# "ಸೇವೆ ಮಾಡುವುದಕ್ಕಾಗಿ ರಕ್ಷಿಸಲ್ಪಟ್ಟಿದ್ದೇವೆ"

ಮತ್ತಾಯ 25 : 31-46

1. ಕೊನೆಯ ದಿನದಲ್ಲಿ ನಾವು ಯಾವುದರಲ್ಲಿ ನ್ಯಾಯ ವಿಚಾರಣೆಗೆ ಒಳಗಾಗುತ್ತೇವೆ ?
2. ನಾವು ಭಿಕ್ಷುಕರಿಗೆ ಯಾಕೆ ಸುಮ್ಮನೆ ಹಣವನ್ನು ಕೊಡಬಾರದು ?
3. ವ.35-36 ರಲ್ಲಿ ಪಟ್ಟಿ ಮಾಡಿರುವ 6 ಸವತಿಗೆಳಲ್ಲಿ ನೀವು ಯಾವುದನ್ನು ಮಾಡುತ್ತಿದ್ದೀರಿ ?
4. ನಾವು ಅಗತ್ಯವಿದ್ದವರನ್ನು ನಿರಾಕರಿಸಿದರೆ ಯಾರನ್ನು ನಿರಾಕರಿಸಿದಂತಾಯಿತು ?

ಧರ್ಮೋಪದೇಶಕಾಂಡ 15 : 7-10

1. ಕಠಿಣ ಹೃದಯ ಅಥವಾ ಕಪಿಮುಷ್ಟಿ ಎಂಬುದರ ಅರ್ಥವೇನು ?
2. ಯಾವ ರೀತಿಯ ದಾನ್ಯವನ್ನು ದೇವರು ನಿಮ್ಮಿಂದ ಎದುರು ನೋಡುತ್ತಾನೆ ?
3. ನಿಮ್ಮ ಸುತ್ತಮುತ್ತಲಿರುವ ಬಡವರು ಯಾರು ? ನೀವು ಅವರಿಗೆ ಯಾವ ರೀತಿಯಲ್ಲಿ ಸಹಾಯ ಮಾಡುತ್ತೀರಿ ?

ಮತ್ತಾಯ 10 : 47

1. ದೇವರಿಂದ ಮರೆಯಲಾಗದ ಕರುಣೆಯ ಅಲ್ಪ ಕಾರ್ಯಗಳು ಯಾವವು ?
2. ನಿಮ್ಮಲ್ಲಿ ಅಲ್ಪ ಹಣವಿದ್ದರೂ ನೀವು ಹೇಗೆ ಸಹಾಯ ಮಾಡಬಹುದು ?

ಯಾಕೋಬ 1 : 27

1. ದೇವರ ದೃಷ್ಟಿಯಲ್ಲಿ ನಿಜವಾದ ಧರ್ಮ ಯಾವುದು ?
2. ದೇವರಿಗೆ ಯಾರ ಬಗ್ಗೆ ವಿಶೇಷ ಆಸಕ್ತಿ ಇದೆ ?

ಅನ್ವಯ :

ನೀವು ಯಾರಿಗೆ ಸಹಾಯ ಮಾಡಬಹುದು? ಅದನ್ನು ಮಾಡಿ. ನೀವು ಇತರ ಶಿಷ್ಯರೊಡನೆ ಬಡವರಿಗೆ ಸಹಾಯ ಮಾಡಲು ಅನುವು ಮಾಡಿಕೊಳ್ಳಿ.

Scanned with CamScanner

# ದಿನ ಹದಿನಾಲ್ಕು : "ಒಂದು ಹೊಸ ಸೃಷ್ಟಿ"

2 ಕೊರಿಂಥ. 5 : 17

1. ನಿಮ್ಮಿಂದ ಹೋದಂಥ ಸಂಗತಿ ಯಾವುದು ? ಮತ್ತು ಬರುತ್ತಿರುವಂಥ ಹೊಸ ಸಂಗತಿ ಯಾವುದು ?

ಮಾರ್ಕ 2 : 21-22

1. ನೀವು ಎಷ್ಟು ಹೊಸಬರಾಗಿರಬೇಕು?
2. ಹೊಸ ಅಭ್ಯಾಸಗಳನ್ನು ಅಳವಡಿಸಿಕೊಳ್ಳುವುದಕ್ಕೂ ಹೃದಯದಲ್ಲಿ ಹೊಸಬರಾಗುವುದಕ್ಕೂ ಇರುವ ವ್ಯತ್ಯಾಸವೇನು ?
3. ನೀವು ಹಳೆಯ ದ್ರಾಕ್ಷಾಚೀಲದಂತಿದ್ದೀರೋ ಅಥವಾ ಹೊಸದರಂತಿದ್ದೀರೋ ?

**ರೋಮಾ 12 : 2**

1. ನಿಮ್ಮ ಜೀವನದಲ್ಲಿರುವ ಪ್ರಾಪಂಚಿಕವಾದ ಚಿಂತೆಗಳು ಯಾವವು ?
2. ನಿಮ್ಮ ಅನಿಸಿಕೆಗಳನ್ನು ಹೇಗೆ ಬದಲಾಯಿಸಿಕೊಳ್ಳಬಹುದು ?

ಎಫೆಸ. 4 : 17-5:2

1. ನಿಮ್ಮ ಹಳೆಯ ಜೀವಿತವನ್ನು ಹಾಗೂ ನಿಮ್ಮ ಅನಿಸಿಕೆಗಳನ್ನು ದೇವರು ಹೇಗೆ ಮನ್ನಿಸುವುದು ಯಾಕೆ ಮುಖ್ಯ ?
2. ನೀವು ಯಾರ ರೀತಿಯಲ್ಲಿರಲು ಸೃಷ್ಟಿಸಲ್ಪಟ್ಟಿದ್ದೀರಿ? ನಾವು ಇತರರನ್ನು ಮನ್ನಿಸುವುದು ಯಾಕೆ ಮುಖ್ಯ?
3. ಪ್ರೀತಿಯಿಂದ ಜೀವಿಸುವುದು ಎಂಬುದರ ಅರ್ಥವೇನು ?

ಅನ್ವಯ :

ನಿಮ್ಮ ಜೀವನದಲ್ಲಿರುವ ಪ್ರಾಪಂಚಿಕವಾದ, ಅನಿಸಿಕೆಗಳನ್ನು ಕೆಟ್ಟ ಅಭ್ಯಾಸಗಳನ್ನು ಕುರಿತು ನಿಮ್ಮನ್ನು ಚೆನ್ನಾಗಿ ತಿಳಿದಿರುವಂಥ ಶಿಷ್ಯರ ಅನಿಸಿಕೆಗಳನ್ನು ಕೇಳಿರಿ.



Scanned with CamScanner

# ದಿನ ಹದಿನೈದು : "ಸ್ವರ್ಗಕ್ಕೆ ಹೋಗಲು ನಂಬಿಕೆ"

**ಪ್ರಕಟನೆ 20 : 11-15**

1. ನ್ಯಾಯತೀರ್ಪಿನ ದಿನವು ಹೇಗಿರುತ್ತದೆ ಎಂಬುದನ್ನು ತಿಳಿಸಿರಿ. ಅಲ್ಲಿ ಯಾರು ಇರುತ್ತಾರೆ ?
2. ಆಗ ಎಲ್ಲರಿಗೆ ಹೇಗೆ ಅನಿಸುತ್ತದೆ ?

**ಪ್ರಕಟನೆ 21 : 1-8**

1. ಮದುಮಗಳು ಯಾರು ?
2. ಸ್ವರ್ಗವನ್ನು ವಿವರಿಸಿರಿ.
3. ವ. 8ರಲ್ಲಿ ನಿಮ್ಮನ್ನು ನೀವೇ ಪರೀಕ್ಷಿಸಿಕೊಳ್ಳಿರಿ.
4. ಇಲ್ಲಿರುವಂತಹ ಪಾಪಗಳು ನಿಮ್ಮ ಜೀವನದಲ್ಲಿ ಇವೆಯೋ ?

**ಪ್ರಕಟನೆ 22 : 1-6**

1. ಯಾವ ರೀತಿಯ ನಿತ್ಯಜೀವದ ಸಂತೋಷಗಳು ಸ್ವರ್ಗದಲ್ಲಿರುತ್ತವೆ ?
2. ಈ ವಚನಗಳು ನಂಬುವುದಕ್ಕೆ ಯೋಗ್ಯವಾಗಿಯೂ ಅರ್ಹವಾಗಿಯೂ ಇವೆ ಎಂದು ದೇವರು ಯಾಕೆ ಹೇಳುತ್ತಾನೆ ?

**ಪ್ರಕಟನೆ 22 : 14-15**

ಇಲ್ಲಿರುವಂತಹ ಯಾವುದಾದರೂ ಪಾಪಗಳು ನಿಮ್ಮ ಜೀವನದಲ್ಲಿರುವವೋ ?

**ಅನ್ವಯ :**

ಸ್ವರ್ಗದಲ್ಲಿನ ಭರವಸೆಗಳಿಗಾಗಿ ದೇವರಿಗೆ ಪ್ರಾರ್ಥಿಸೋಣ. ನಿಮ್ಮಲ್ಲಿ ಯಾವುದಾದರೂ ಪಾಪಗಳಿದ್ದರೆ ಅವುಗಳನ್ನು ಅರಿಕೆ ಮಾಡಿರಿ ಮತ್ತು ಬದಲಾವಣೆ ಆಗಿರಿ. ಇದನ್ನು ಈ ದಿನ ಮಾಡಿರಿ.

Scanned with CamScanner

# ದಿನ ಹದಿನಾರು : "ರಕ್ಷಿಸುವುದಕ್ಕೆ ರಕ್ಷಣೆ ಹೊಂದಿದ್ದೇವೆ"

1 ಪೇತ್ರ 2 : 9-10

1. "ದೇವರಾದುಕೊಂಡು ರಾಜವಂಶಸ್ಥರು" ಎಂಬುದರ ಅರ್ಥವೇನು?
2. ನೀವು ಯಾವ ಸಂದೇಶವನ್ನು ಸಾರಬೇಕು?
3. ನೀವು ನಿಜವಾಗಿಯೂ ದೇವರ ಮಹಿಮೆಯನ್ನು ಸಾರುತ್ತಿದ್ದೀರೋ ? ಅಥವಾ ಸುಮ್ಮನೆ ಆಹ್ವಾನವನ್ನು ಕೊಡುತ್ತಿದ್ದೀರೋ "

2 ಕೊರಿಂಥ 5 : 14-21

1. ನೀವು ದೇವರಿಗೋಸ್ಕರ ಜೀವಿಸುತ್ತಿದ್ದೀರೋ ಅಥವಾ ನಿಮಗೋಸ್ಕರ ಜೀವಿಸುತ್ತಿದ್ದೀರೋ ಎಂದು ಹೇಗೆ ತಿಳಿಯುತ್ತದೆ ?
2. ದೇವರು ರಾಯಭಾರಿಗಳು ಎಂಬುದರ ಅರ್ಥವೇನು?
3. ನೀವು ಜೀವಿಸುವ ರೀತಿಯ ದೇವರಿಗೆ ಇಷ್ಟವಾಗುತ್ತದೆಯೋ ?
4. ಜನರಿಗೆ ದೇವರ ಸುವಾರ್ತೆ ಸಾರುವುದು ಎಂಬುದರ ಅರ್ಥವೇನು ?
5. ನಾಶವಾಗುತ್ತಿರುವ ಜನರ ಬಗ್ಗೆ ನಿಮ್ಮ ಅನಿಸಿಕೆ ಏನು ?

ಅಪೊಸ್ತಲರ ಕೃತ್ಯಗಳು 17 : 16-24

1. ಪೌಲನು ಯಾಕೆ ಬೇಸರಗೊಂಡಿದ್ದನು ?
2. ನಿಮ್ಮ ಸುತ್ತಮುತ್ತಲಿನ ಯಾವ ಸಂಗತಿಗಳು ನಿಮ್ಮನ್ನು ನಿರಾಶೆಗೊಳಿಸುತ್ತವೆ ?
3. ಪೌಲನು ಎಲ್ಲಿ ಆತನ ನಂಬಿಕೆಯನ್ನು ಹಂಚಿಕೊಂಡನು ?
4. ಪೌಲನು ಯಾಕೆ ಆಚಾರಗಳಿಂದ ಕೂಡಿದ ಅಥೇನಿನ ಜನರಲ್ಲಿ ಸುವಾರ್ತೆ ಸಾರುವುದಕ್ಕೆ ತೊಡಗಿದನು ?
5. ಆಚಾರಗಳಿಂದ ಕೂಡಿದ ಧಾರ್ಮಿಕ ಜನರನ್ನು ಸಂಧಿಸುವುದರ ಅರ್ಥವೇನು ? (ಇತರ ನಂಬಿಕೆಗಳಿಂದ ಕೂಡಿರುವ ಜನರ ಬಗ್ಗೆ)
6. ಜನರು ಪೌಲನು ಪ್ರಸಂಗಕ್ಕೆ ಯಾವ ರೀತಿ ಉತ್ತರಿಸಿದರು.?

ಅನ್ವಯ :

ಈ ದಿನ ಕಲಿತಂಥಹ ಸುವಾರ್ತೆ ಸೇವೆಯ 4 ಸಂಗತಿಗಳನ್ನು ಬರೆಯಿರಿ. ಇದನ್ನು ಇತರರೊಡನೆ ಹಂಚಿಕೊಳ್ಳಿರಿ.



Scanned with CamScanner

## ದಿನ ಹದಿನೇಳು :

# "ಚಂಚಲತೆಯಿಂದ ಇದ್ದೀರೋ ಅಥವಾ ಸಮರ್ಪಣೆಯಿಂದಿದ್ದೀರೋ"

ಲೂಕ 10 : 38-42

1. ಮಾರ್ಥಳು ಯಾವುದರಲ್ಲಿ ಚಂಚಲಚಿತ್ತಾಳಾಗಿದ್ದಳು ?
2. ಅವಳಿಗೆ ಹೇಗೆ ಅನ್ನಿಸುತ್ತಿತ್ತು?
3. ಈ ವಾರದಲ್ಲಿ ನೀವು ಚಂಚಲಚಿತ್ತರಾದ ಸಂಗತಿಗಳಾದವು ?
4. ನೀವು ಮಾರ್ಥಳ ಹಾಗೆ ಇದ್ದೀರೋ ಅಥವಾ ಮರಿಯಳ ಹಾಗೆ ಇದ್ದೀರೋ ?
5. ಮರಿಯಳು ಯಾವುದನ್ನು ಆರಿಸಿಕೊಂಡಳು?
6. ಯಾವುದು ಸರಿಯಾದದ್ದು ?

ಲೂಕ 8 : 14

1. "ಅಡಗಿಸಲ್ಪಡುವದು " ಎಂಬುದರ ಅರ್ಥವೇನು ?
2. ಅದರ ಫಲಿತಾಂಶವೇನು?
3. ನಿಮ್ಮ ಚಿಂತೆಗಳು, ಪ್ರಾಪಂಚಿಕ ಆಸೆ, ಸುಖ ಭೋಗಗಳು ನಿಮ್ಮನ್ನು ಬೆಳೆಯುವುದರಿಂದ ತಡೆದಿಟ್ಟವೆಯೋ ?

ಲೂಕ 12 : 35-40

1. ನಾವು ಯಾಕೆ ಯೇಸುವನ್ನು ಸ್ವಾಗತಿಸಲು ಸಿದ್ಧರಿರಬೇಕು ?
2. ನಾವು ನಮ್ಮ ಉದ್ದೇಶದಿಂದ ದೂರವಾಗಿ ಸ್ವ ಇಚ್ಛೆಯಿಂದ ಮಾಡುವಾಗ ದೇವರು ಹೇಗೆ ತಿಳಿಯುತ್ತಾನೆ ?

ಅನ್ವಯ :

ನೀವು ಚಂಚಲಚಿತ್ತದಿಂದ ಕೂಡಿದ್ದು, ಸಮಯವನ್ನು ವ್ಯರ್ಥ ಮಾಡುತ್ತಿದ್ದರೆ. ನಿಮ್ಮ ದಿನಚರಿಯನ್ನು ಬರೆಯಿರಿ. ನೀವು ಇತರ ಶಿಷ್ಯರ ಸಹಾಯ ತೆಗೆದುಕೊಳ್ಳಿರಿ.

Scanned with CamScan

# ದಿನ ಹದಿನೆಂಟು : "ಇತರರಿಂದ ಕಲಿಯುವುದು"

ಮತ್ತಾಯ 18 : 1-4

1. ಯಾವ ರೀತಿಯಾದ ಹೃದಯವನ್ನು ನಮ್ಮಿಂದ ದೇವರು ಎದುರು ನೋಡುತ್ತಾನೆ?
2. ಚಿಕ್ಕಮಕ್ಕಳ ಯಾವ ಗುಣವನ್ನು ನಾವು ಅನುಸರಿಸಬೇಕು?

1ಥೆಸಲೊನೀಕ. 5 : 12-14

1. ಕ್ರಿಸ್ತನಲ್ಲಿರುವ "ನಿಮ್ಮ ಜೀವನದ " ಮೇಲ್ವಿಚಾರಕರು ಯಾರು ?
2. ಇದು ವಯಸ್ಸು ಮತ್ತು ವ್ಯಾಸಂಗದ ಮೇಲೆ ಅವಲಂಬಿಸಿದೆಯೋ ?
3. ಕಷ್ಟಪಟ್ಟು ಕೆಲಸ ಮಾಡುತ್ತಿರುವ, ಮಾದರಿಯಾಗಿರುವ ನಿಮ್ಮನ್ನು ಎಚ್ಚರಿಸುವ ಶಿಷ್ಯರ ಪಟ್ಟಿಯನ್ನು ಸಿದ್ಧ ಮಾಡಿರಿ.
4. ನೀವು ಅವರಿಗೆ ಮಾನ ಮರ್ಯಾದೆಯನ್ನು ತೋರಿಸುತ್ತಿದ್ದೀರೋ ?
5. ಯಾವ ರೀತಿಯ ಶಿಷ್ಯರಿಗೆ ವಿಶೇಷ ಸಹಾಯಬೇಕು ?

ಕೀರ್ತನೆ.119 :99-100

1. ಯಾವುದು ನಮಗೆ ಉತ್ತಮ ಜ್ಞಾನವನ್ನು ತಿಳುವಳಿಕೆಯನ್ನು ಕೊಡುತ್ತದೆ ?
2. ವಚನ 100 ರಲ್ಲಿ ಯಾವ ರೀತಿ ಸಮಾಜ ಚಿಂತಿಸುತ್ತದೆ ಎಂದು ತಿಳಿಸುತ್ತದೆ ?
3. ನಿಮಗೆ ಕಲಿಸುವಾಗ ಯಾವ ರೀತಿಯ ಚಿಂತೆ ಇರಬೇಕು ? / ತಿದ್ದಿದಾಗ / ನಿಮಗಿಂತ ಚಿಕ್ಕವರೊಂದಿಗೆ.

1 ತಿಮೋಥೆ. 4 : 11-12

1. ಯುವ ನಾಯಕರಿಂದ ದೇವರು ಏನನ್ನು ಎದುರು ನೋಡುತ್ತಾನೆ ?

ಕೀರ್ತನೆ .32 : 8-10

1. ನೀವು ಕುದರೆ ಅಥವಾ ಕತ್ತೆಯಂತೆ ಇದ್ದೀರೋ ?

ಅನ್ವಯ :

ನೀವು ಯುವಕರಿಂದ ಕಲಿಯುವದನ್ನು ನಿರಾಕರಿಸಿದ್ದರೆ, ಬದಲಾಗಿ ಅವರಿಂದ ಈ ದಿನ ಪ್ರಶ್ನೆಯನ್ನು ಕೇಳಿ ತಿಳಿದುಕೊಳ್ಳಿರಿ. ನೀವೇ ಯುವಕರಾಗಿದ್ದರೆ ಇತರರಿಗೆ ಒಳ್ಳೆಯ ಉದಾಹರಣೆಯಾಗಿರಿ.

Scanned with CamScan

# ದಿನ ಹತ್ತೊಂಬತ್ತು : "ಶಕ್ತಿಯುತವಾದ ಪ್ರಾರ್ಥನೆಗಳು"

1 ಪೂರ್ವಕಾಲ ವೃತ್ತಾಂತ 17 : 15-22

1. ದಾವೀದನಿಗೆ ದೇವರಲ್ಲಿ ಪ್ರಾರ್ಥಿಸಿದಾಗ ಹೇಗೆ ಅನ್ನಿಸಿತು ? ಯಾಕೆ?
2. ದೇವರು ನಿಮಗೆ ಯಾವ ರೀತಿಯಲ್ಲಿ ಆಶೀರ್ವದಿಸಿದ್ದಾನೆ ?
3. ಇಸ್ರಾಯೇಲ್ಯರನ್ನು ದೇವರು ಯಾಕೆ ಆಶೀರ್ವಾದಿಸಿದನು?
4. ಈ ದಿನಗಳಲ್ಲಿ ಹೇಗೆ ತನ್ನ ಜನರಿಗಾಗಿ ಮಹಾಕಾರ್ಯಗಳನ್ನು ಮಾಡಿದ್ದಾನೆ?
5. ಈ ಪ್ರಾರ್ಥನೆಯು ದೇವರಿಗೆ ಯಾವ ರೀತಿಯಲ್ಲಿ ವ್ಯಕ್ತಪಡಿಸಿತು ?

ಆದಿಕಾಂಡ 24 : 10-27

1. ಯಾಕೆ ದೇವರು ಈ ಪ್ರಾರ್ಥನೆಯನ್ನು ಬಲು ಬೇಗ ಉತ್ತರಿಸಿದನು ?
2. ಸೇವಕನ ಪ್ರಾರ್ಥನೆಯು ಸರಳವಾಗಿದ್ದಿತು, ಆದರೆ ನಂಬಿಕೆಯುಳ್ಳದ್ದಾಗಿತ್ತು. ನೀವು ಅದನ್ನು ಹೇಗೆ ಹೇಳಬಹುದು?
3. ಉತ್ತರಿಸಲ್ಪಟ್ಟ ಪ್ರಾರ್ಥನೆಗೆ ಸೇವಕನ ಪ್ರತಿಕ್ರಿಯೆ ಏನು ?
4. ಉತ್ತರಿಸಲ್ಪಟ್ಟ ಪ್ರಾರ್ಥನೆಯನ್ನು ನೀವು ನೆನಪಿಸಿಕೊಂಡು ಕೃತಜ್ಞತೆಯುಳ್ಳವರಾಗಿದ್ದೀರೋ ?

ಯಾಕೋಬ 5 : 15-18

1. ಪ್ರಾರ್ಥನೆಯನ್ನು ಯಾವುದು ಶಕ್ತಿಯುತವಾಗಿಯೂ ಪರಿಣಾಮಕಾರಿಯಾಗಿಯೂ ಮಾಡುತ್ತದೆ?
2. ನೀವು ಯಥಾರ್ಥತೆಯಿಂದಲೂ ಆತ್ಮಾಸಕ್ತಿಯಿಂದಲೂ ಪ್ರಾರ್ಥಿಸುತ್ತಿದ್ದೀರೋ?
3. ನೀವು ಅತೀ ನಂಬಿಕೆಯಿಂದ ಪ್ರಾರ್ಥಿಸುತ್ತಿದ್ದೀರೋ? ಈ ವಾರದಲ್ಲಿ ನೀವು ನೀತಿವಂತರಾಗಿದ್ದೀರೋ ?

ಅನ್ವಯ :

ನಿಮ್ಮ ಪ್ರಾರ್ಥನೆಯು ಈ ದಿನ ನಿರ್ದಿಷ್ಟವಾಗಿರಲಿ , ನೀವು ನಂಬಿಕೆಯಿಂದ ಕೃತಜ್ಞತೆಯಿಂದ ಪ್ರಾರ್ಥಿಸಿರಿ.

Scanned with CamScanner

# ದಿನ ಇಪ್ಪತ್ತು : "ಪ್ರಪಂಚದಿಂದ ಶೋಧಿಸಲ್ಪಟ್ಟಿದ್ದು"

ಕೀರ್ತನೆ 73 : 1-14

1. ಸುತ್ತಮುತ್ತಲಿರುವ ಐಶ್ವರ್ಯವಂತರನ್ನು, ನಶಿಸಿ ಹೋಗುತ್ತಿರುವವರನ್ನು ನೋಡಿ ಕೀರ್ತನಾಕಾರನಿಗೆ ಹೇಗೆ ಅನ್ನಿಸಿತು ?
2. ಈ ಜೀವನವು ನಶ್ವರವೆಂದು ಆತನಿಗೆ ಯಾಕೆ ಅನ್ನಿಸಿತು ?
3. ಈ ಪ್ರಪಂಚದಲ್ಲಿರುವ ಜನರಲ್ಲಿ ನೀವು ಯಾಕೆ ಅಸೂಯೆಪಟ್ಟಿರಿ ?
4. ನೀವು ಕ್ರೈಸ್ತರಾದಾಗಿನಿಂದ ಬಾಧೆಪಟ್ಟಿದ್ದೀರೋ ? ನೀವು ಅದರ ಕುರಿತು ಮಾತನಾಡುದ್ದೀರೋ?

ಕೀರ್ತನೆ 73 : 15-22

1. ಆತನು ಅದರ ಅಂತ್ಯವೆನೆಂದು ತಿಳಿದನು?
2. ಹೇಗೆ 'ಒಳ್ಳೆಯ ಜೀವನವು ' ನ್ಯಾಯತೀರ್ಪಿನ ದಿನಗಳಲ್ಲಿ ಕನಸಿನಂತೆ ಕೊನೆ ಕೊಳ್ಳುತ್ತದೆ ?
3. ಕೀರ್ತನಾಕಾರನು ಅವರ ಕುರಿತಾಗಿ ಅಸೂಯೆಪಡುತ್ತಿರುವಾಗ ಆತನು ಏನೆಂದು ಆಲೋಚಿಸಿದನು?

ಕೀರ್ತನೆ 73 : 23-28

1. ದೇವರೊಂದಿಗಿನ ಸಂಬಂಧವನ್ನು ಕೀರ್ತನಾಕರನು ಯಾವ ರೀತಿಯಲ್ಲಿ ಅರ್ಥ ಮಾಡಿಕೊಂಡನು ?
2. ವಚನ 25,26 ರನ್ನು ಬಾಯಿಪಾಠ ಮಾಡಿರಿ.

1.ಯೋಹಾನ 2 : 15-17

1. ಪ್ರಪಂಚದಲ್ಲಿನ ಯಾವುದನ್ನು ನೀವು ದ್ವೇಷಿಸಬೇಕು ?
2. ಪ್ರಪಂಚದಲ್ಲಿನ ಯಾವ ಸಂಗತಿಯು ನಿಮ್ಮನ್ನು ಆಕರ್ಷಿಸುತ್ತದೆ ?

ಅನ್ವಯ :

ನಿಮ್ಮ ಅನಿಸಿಕೆಯನ್ನು, ಪ್ರಾಪಂಚಿಕತನವನ್ನು, ನಿಮ್ಮನ್ನು ಶಿಷ್ಯತ್ವಕ್ಕೆ (ಮಾರ್ಗ ದರ್ಶಿಗಳು) ನಡೆಸುವವರ ಹತ್ತಿರ ಮಾತನಾಡಿರಿ. ನೀವು ಯಾವ ರೀತಿಯ ಶೋಧನೆಗೆ ಒಳಗಾಗಿದ್ದೀರಿ? ಈ ದಿನ ಅವುಗಳಿಗೋಸ್ಕರ ಪ್ರಾರ್ಥನೆ ಮಾಡಿರಿ.

Scanned with CamScanner

# ದಿನ ಇಪ್ಪತ್ತೊಂದು : "ಶೋಧನೆಗಳಲ್ಲಿ ಸಂತೋಷದಿಂದಿರಿ"

ಮತ್ತಾಯ 5 : 10-11

1. ನಾವು ಶೋಧನೆಗಳಲ್ಲಿ ಸಂತೋಷದಿಂದಿರಲು ಯಾವುದು ಸಹಾಯ ಮಾಡಬೇಕು?
2. ಯೇಸುವಿಗೋಸ್ಕರ ಜನರು ನಿಮ್ಮನ್ನು ಹೀಯಾಳಿಸಿದ್ದಾರೋ ? ಅಥವಾ ನಿಮ್ಮ ಬಗ್ಗೆ ಕೆಟ್ಟದ್ದನ್ನು ಹೇಳಿದ್ದಾರೋ ?
3. ನಿಮಗೆ ಹೇಗನ್ನಿಸಿತು ?
4. ಇತರೆ ಯಾರು ಈ ರೀತಿಗೊಳಗಾದರು ?

ಯೋಹಾನ 15 :18-23

1. ನಾವು ಯಾವ ರೀತಿ ನಡೆಸಲ್ಪಡುವದನ್ನು ಎದುರು ನೋಡಬೇಕು ?
2. ಪ್ರಪಂಚವು ಯಾಕೆ ನಮ್ಮನ್ನು ದ್ವೇಷಿಸುತ್ತದೆ ?
3. ನಾನು ಶಿಷ್ಯರಾಗುತ್ತಿರುವಾಗ ಜನರಿಗೆ ಯಾಕೆ ಅಪರಾಧಿಭಾವ ಉಂಟಾಗುತ್ತದೆ ?

ಅಪೊಸ್ತಲರ ಕೃತ್ಯಗಳು 4 : 13-22

1. ಪೇತ್ರ ಮತ್ತು ಯೋಹಾನರಿಗೆ ಯಾವುದು ಧೈರ್ಯ ತಂದಿತು?
2. ನೀವು ಯೇಸುವಿನ ಬಗ್ಗೆ ಕಲಿಸುವದನ್ನು, ತಿಳಿಸುವುದನ್ನು, ಮಾತನಾಡುವುದನ್ನು ಯಾರಾದರೂ ತಡೆದಿದ್ದಾರೋ ?

ಅಪೊಸ್ತಲರ ಕೃತ್ಯಗಳು 5 : 17-19

1. ಮತ್ಸರದಿಂದಾಗಿ ಯೇಸುವು ಹಿಂಸೆಗೊಳಗಾದನು (ಮಾರ್ಕ 15 : 10). ಅಪೊಸ್ತಲರು ಅಸೂಯೆಯಿಂದಾಗಿ ಬಂಧನಕ್ಕೊಳಗಾದರು.
2. ನಾವು ಯಾಕೆ ಹಿಂಸೆಗೆ ಮತ್ತು ಅಪವಾದಕ್ಕೆ ಒಳಗಾಗುತ್ತೇವೆ ?
3. ಯಾರಿಂದ ?
4. ನಿಲ್ಲಿಸೆಂದು ಹೇಳಿದಾಗ ಅಪೊಸ್ತಲರು ಯಾವ ಉತ್ತರವನ್ನು ಕೊಟ್ಟರು ?

ಅಪೊಸ್ತಲರ ಕೃತ್ಯಗಳು 5 : 40-42

1. ಅಪೊಸ್ತಲರಿಗೆ ಯಾವುದು ಸಂತೋಷವನ್ನು ತಂದಿತು ?

ಅನ್ವಯ :

42 ನೇ ವಚನವು ನಿಮ್ಮ ಜೀವನದಲ್ಲಿ ಈ ದಿನ ಮತ್ತು ಅನುದಿನವೂ ದಾರಿದೀಪವಾಗಿರಲಿ.



Scanned with CamScan

# ದಿನ ಇಪ್ಪತ್ತೆರಡು : "ಕೊಡುವುದು ಮತ್ತು ಜೀವಿಸುವುದು"

**ಯೋಹಾನ 13 : 1-17**

1. ಯೇಸುವು ತನ್ನ ಪರಿಪೂರ್ಣವಾದ ಪ್ರೀತಿಯನ್ನು ಹೇಗೆ ತೋರಿಸಿದನು ?
2. ತನ್ನ ಶಿಷ್ಯರಿಗೆ ಯಾವುದನ್ನು ತಿಳಿಸುತ್ತಿದ್ದನು ?
3. ನಾವು ಯಾವ ರೀತಿ 17ನೇ ವಚನವನ್ನು ಅನುಸರಿಸಬಹುದು ?
4. ಕೆಲವು ಸೂಕ್ತ ಉದಾಹರಣೆಗಳನ್ನು ಕೊಡಿರಿ.

**ಅಪೊಸ್ತಲರ ಕೃತ್ಯಗಳು 9 : 36-42**

1. ದೊರ್ಕಳು ಯಾಕೆ ಎಲ್ಲರಿಂದ ಪ್ರೀತಿಗೆ ಪಾತ್ರಳಾಗಿದ್ದಳು ?
2. ಆಕೆಯ 'ಆತ್ಮೀಯ ಸ್ನೇಹಿತರು ' ಯಾರು ?
3. ಆಕೆಯು ಯಾಕೆ ಇತರರಿಗೆ ಅಷ್ಟೊಂದು ಸಹಾಯ ಮಾಡಿದಳು ?
4. ನೀವು ಈ ದಿನ ಸತ್ತರೆ ಜನರು ನಿಮ್ಮ ಬಗ್ಗೆ ಏನೆಂದು ತಿಳಿಯುತ್ತಾರೆ ?
5. ನಾವು ದೊರ್ಕಳಿಂದ ಏನನ್ನು ಕಲಿಯಬಹುದು ?

**ಫಿಲಿಪ್ಪಿ. 2 : 19-24**

1. ತಿಮೊಥೆಯನು ಇತರರಿಗಿಂತ ಹೇಗೆ ವಿಭಿನ್ನವಾಗಿದ್ದನು ?
2. ಇತರರ ಹಿತಕ್ಕಾಗಿ ಯಥಾರ್ಥವಾಗಿ ಚಿಂತಿಸುವುದು ಎಂಬುದರ ಅರ್ಥವೇನು ?
3. ನೀವು ತಿಮೊಥೆಯನ ಹಾಗೆ ಹೇಗಿರಬಹುದು?

**ಅನ್ವಯ :**

ಪ್ರಾಯೋಗಿಕವಾಗಿ ನೀವು ಇತರ ಶಿಷ್ಯನ ಬಗ್ಗೆ ಚಿಂತಿಸುತ್ತೀರೆಂಬುದನ್ನು ಕುರಿತು ಆಲೋಚಿಸಿರಿ ಮತ್ತು ಅದನ್ನು ಈ ದಿನ ಮಾಡಿರಿ.

Scanned with CamScan

# ದಿನ ಇಪ್ಪತ್ಮೂರು : "ಪಾಪವನ್ನು ಅರಿಕೆ ಮಾಡುವದು"

ಕೀರ್ತನೆ 32 : 1-7

1. ನಾವು ಪಾಪದ ಅರಿಕೆ ಮಾಡದೆ ಬಚ್ಚಿಟ್ಟುಕೊಂಡದ್ದಾಗ ಹೇಗೆನ್ನಿಸುತ್ತದೆ ?

2. ನಿಮ್ಮ ದೀಕ್ಷಾಸ್ನಾನದ ದಿನದಿಂದ ಹಾಗೇನಾದರೂ ಅನ್ನಿಸಿದೆಯೋ ? ನಿಮ್ಮ ಜೀವನದಲ್ಲಿ ಅರಿಕೆ ಮಾಡದಂತಹ ಯಾವುದಾದರೂ ಪಾಪವಿದೆಯೋ ?

ಜ್ಞಾನೋಕ್ತಿಗಳು 28 : 13

1. ನಮ್ಮ ಪಾಪವನ್ನು ದೇವರಿಂದ ಮುಚ್ಚಿಡಲು ಸಾಧ್ಯವೇ ?

2. ನಾವು ದೇವರನ್ನು ಬಿಟ್ಟು ಇತರ ಯಾರಿಗಾದರೂ ಪಾಪದ ಅರಿಕೆ ಮಾಡಬೇಕೋ ?

3. ಅರಿಕೆ ಮಾಡದೆ ಇದ್ದರೆ ಏನಾಗುತ್ತದೆ ?

ಲೂಕ 8 :17

1. ಯಾಕೆ ನಮ್ಮ ಪಾಪವನ್ನು ಮುಚ್ಚಿಟ್ಟುಕೊಳ್ಳುವದು ಮೂರ್ಖತನವಾಗಿದೆ ?

ಕೀರ್ತನೆ .66 :18-19

ನಮ್ಮ ಪಾಪವನ್ನು ನಮ್ಮಲ್ಲಿಯೇ ಇಟ್ಟುಕೊಂಡರೆ ಏನಾಗುತ್ತದೆ ?

ಅನ್ವಯ :

ಕೆಲವು ಸಮಯವನ್ನು ತೆಗೆದುಕೊಂಡು ನಿಮ್ಮ ಪಾಪಗಳು, ಅನಿಸಿಕೆಗಳು, ಕೆಲಸ ಕಾರ್ಯಗಳ ಬಗ್ಗೆ ಚಿಂತಿಸಿರಿ. ಅವು ನಿಮ್ಮನ್ನು ಭಾದಿಸುತ್ತವೆ. ಯಾಕೆಂದರೆ ಅವುಗಳನ್ನು ನೀವು ಇತರರೊಡನೆ ಹಂಚಿಕೊಂಡಿಲ್ಲ, ಅವುಗಳನ್ನು ಬರೆದು ಇತರರೊಡನೆ ಹಂಚಿಕೊಳ್ಳಿರಿ.

Scanned with CamScanner

# ದಿನ ಇಪ್ಪತ್ನಾಲ್ಕು : "ಕೌಟುಂಬಿಕ ನಿರ್ಬಂಧ"

ಮಾರ್ಕ 3 : 20-21

1. ಯೇಸುವಿನ ಮನೆಯವರು ಯಾಕೆ ಸಿಡಿಮಿಡಿಗೊಂಡರು ?

2. ನಿಮ್ಮನ್ನು ನೀವೇ ಭಾದೆಪಡಿಸಿಕೊಂಡಿದ್ದೀರೆಂದು, ದೇವರನ್ನು ನೀವು ಅನುಸರಿಸುವದನ್ನು ನಿಮ್ಮ ಮನೆಯವರು ತಡೆಗಟ್ಟಿದ್ದಾರೋ ?

3. ಯೇಸು ಅವರು ಹೇಳಿದಂತೆ ಒಪ್ಪಿಕೊಂಡಿದ್ದರೆ ಏನಾಗುತ್ತಿತ್ತು ?

ಯೋಹಾನ 7 : 1-7

1. ಯೇಸುವಿನ ಸ್ವಂತ ಸಹೋದರರು ಏನೆಂದು ತಿಳಿದರು?

2. ಯೇಸುವಿನ ತನ್ನ ಸ್ವಂತ ಜನರು ಹೇಳಿದ ಹಾಗೆ ಯಾಕೆ ಮಾಡಲಿಲ್ಲ ?

ಮತ್ತಾಯ 10 : 37-39

1. ನಿಮ್ಮ ಕುಟುಂಬದವರನ್ನು ಹೇಗೆ ಹೆಚ್ಚಾಗಿ ಪ್ರೀತಿ ಮಾಡಬಹುದೆಂದು ಪಟ್ಟಿಯನ್ನು ಸಿದ್ಧಪಡಿಸಿರಿ.

2. ಈ ದಿನ ಇತರರು ನಿಮ್ಮನ್ನು ನೋಡುವುದಾದರೆ ನೀವು ಯಾರನ್ನು ಹೆಚ್ಚಾಗಿ ಪ್ರೀತಿ ಮಾಡುತ್ತೀರಿ ಎಂದು ಹೇಳುತ್ತಾರೆ ?

ಅನ್ವಯ :

ನಿಮ್ಮ ಕುಟುಂಬದವರು ಬಲವಂತಪಡಿಸುವುದನ್ನು ಇತರ ಹಿರಿಯ ಶಿಷ್ಯರೊಡನೆ ಚರ್ಚಿಸಿರಿ. ನೀವು ಏನಾದರೂ ಬದಲಾವಣೆ ಮಾಡಬೇಕಾದದ್ದು ಉಂಟೋ ?

Scanned with CamScan

# ದಿನ ಇಪ್ಪತ್ತೈದು : "ತೆರೆದ ಮನಸ್ಸಿನಿಂದಿರುವದು"

ಯೋಹಾನ 15 :15

1. ಯೇಸು ತನ್ನ ಶಿಷ್ಯರೊಂದಿಗೆ ಏನನ್ನು ಹಂಚಿಕೊಂಡನು ?
2. ನೀವು ಇತರ ಕ್ರೈಸ್ತರಿಗೆ ಈ ರೀತಿಯಲ್ಲಿನ ಸ್ನೇಹಿತರಾಗಿದ್ದೀರೋ ?
3. ನಿಮ್ಮ ಜೀವನ ಪೂರ್ತಿಯಾಗಿ ಅವರು ನಿಮ್ಮನ್ನು ತಿಳಿದಿದ್ದಾರೋ ?

2 ಕೊರಿಂಥ. 6 : 11-13

1. ಪೂರ್ಣ ಹೃದಯದಿಂದ ಮಾತನಾಡುವುದು ಎಂಬುದರ ಅರ್ಥವೇನು ?
2. ನಿಮ್ಮ ಹೃದಯವನ್ನು ಇತರರಿಗೆ ತಿಳಿಸಿದ್ದೀರೋ ?
3. ನಿಮ್ಮ ಯಾವ ಅನಿಸಿಕೆಗಳನ್ನು ಇತರರೊಂದಿಗೆ ಹಂಚಿಕೊಳ್ಳುತ್ತಿಲ್ಲ ?

ಜ್ಞಾನೋಕ್ತಿಗಳು 20 :5

1. ನೀವು ತೆರೆದ ಮನಸ್ಸಿನಿಂದ ನಿಮ್ಮನ್ನು ಮಾರ್ಗದರ್ಶನ ಮಾಡಲು / ಬುದ್ಧಿ ಹೇಳಲು ಇತರರಿಗೆ ಸಹಾಯ ಮಾಡುತ್ತಿದ್ದೀರೋ ? ಅಥವಾ ಅನೇಕ ಪ್ರಶ್ನೆಗಳಿಂದ ಇತರರು ನಿಮ್ಮನ್ನು ಕರೆತರಬೇಕೋ ?

ಅನ್ವಯ :

ನೀವು ಇತರರೊಡನೆ ಸಮಯವನ್ನು ಕಳೆದು ನಿಮ್ಮ ಅನಿಸಿಕೆ / ಗುರಿಗಳು / ಮತ್ತು ಗುಪ್ತ ಪಾಪಗಳನ್ನು ತಿಳಿಸಿರಿ. ಇವುಗಳನ್ನು ಇತರ ಶಿಷ್ಯರೊಡನೆ ಚರ್ಚಿಸಿರಿ ಮತ್ತು ತೆರೆದ ಮನಸ್ಸುಳ್ಳವರಾಗಿರಿ.

Scanned with CamScanner

ಕಳೆದ ಹತ್ತು ದಿನಗಳನ್ನು ಪರಿಶೀಲಿಸಿ, ನಿಮ್ಮ ಜೀವನದಲ್ಲಿ ಈ ಪಾಠಗಳನ್ನುಳವಡಿಸಿಕೊಂಡಿದ್ದೀರೋ ? ನೀವು ನಿಮ್ಮ ಭಾವನೆಗಳನ್ನು /ಯೋಜನೆಗಳು/ ಗುಪ್ತ ಪಾಪಗಳ ಕುರಿತು ಬರೆದುಕೊಂಡು ಬಿಚ್ಚು ಮನಸ್ಸಿನಿಂದ ಮಾತನಾಡಬೇಕು. ಈ ದಿನ ಇತರ ಶಿಷ್ಯರೊಡನೆ ಸಮಯವನ್ನು ಕಳೆಯಿರಿ.

# ದಿನ ಇಪ್ಪತ್ತಾರು : "ಅನುಮಾನವನ್ನು ತೆಗೆದುಹಾಕುವದು"

**ಮತ್ತಾಯ 11 : 16**

1. ಸ್ನಾನಿಕನಾದ ಯೋಹಾನನಿಗೆ ಎಲ್ಲವೂ ತಿಳಿದಿದ್ದಾಗಲು ಸಹ ಯಾಕೆ ಅನುಮಾನ ಪಟ್ಟನು ?

2. ಯೋಹಾನನು ಅನುಮಾನವನ್ನು ತೆಗೆದು ಹಾಕಲು ಏನು ಮಾಡಿದನು ?

3. ನಿಮ್ಮ ಮನಸ್ಸಿನಲ್ಲಿ ಅನುಮಾನ ಬಂದಾಗ ಏನು ಮಾಡಬೇಕು ?

**ಮತ್ತಾಯ 18 : 16-17**

ಇದು ನಿಮಗೆ ಆಶ್ಚರ್ಯಪಡಿಸುತ್ತದೋ ? ಅನುಮಾನ ಬಂದಾಗ ಏನು ಮಾಡಬೇಕೆಂದು ಶಿಷ್ಯರಿಗೆ ಯೇಸು ಹೇಳಿದ್ದಾನೆ ?

**1. ಕೊರಿಂಥ . 15 : 11-14**

1. ಕೊರಿಂಥ ಸಭೆಯವರು ಯಾವುದನ್ನು ಕುರಿತಾಗಿ ಅನುಮಾನ ಪಟ್ಟಿದ್ದರು ? ಮೊದಲು ನಂಬಿದ್ದರು ಆನಂತರ ಕೆಲವರು ಯಾಕೆ ಅನುಮಾನಪಟ್ಟರು ?

2. ಮೊದಲು ನಂಬಿ ಆನಂತರ ಅನುಮಾನಪಟ್ಟ ಸಂಗತಿಗಳಾವವು ?

**ಲೂಕ 24 : 36-45**

1. ಅನುಮಾನಗಳು ಎಲ್ಲಿಂದ ಬರುತ್ತವೆ ?

2. ಯೇಸು ಅವರ ನಂಬಿಕೆ ಹೆಚ್ಚಿಸಲು ಏನು ಮಾಡಿದನು ?

**ಅನ್ವಯ :**

ನೀವು ಬಿಚ್ಚು ಮನಸ್ಸಿನಿಂದಲೂ ದೇವರ ವಾಕ್ಯದಿಂದಲೂ ಮತ್ತು ವಿಧೇಯತೆಯಿಂದ ಅನುಮಾನಗಳನ್ನು ಹೇಗೆ ಜಯಿಸಬಹುದೆಂದು ಸಂಕ್ಷಿಪ್ತವಾಗಿ ಬರೆಯಿರಿ.



Scanned with CamScanner

ಪಾಠ ಇಪ್ಪತ್ತೇಳು :

## "ವಿಶ್ವಾಸದಿಂದಿರುವುದನ್ನು ಕಲಿಯುವುದು"

ಮೊದಲನೆಯದಾಗಿ ಪ್ರಾಮಾಣಿಕತನ ಎಂದರೆ ಏನು ?

1 ಕೊರಿಂಥ. 13 : 4-7

1. ಈ ವಚನದಲ್ಲಿ ನಿಮ್ಮ ಹೆಸರನ್ನು ಬರೆದು ಓದಿ (ಪ್ರೀತಿಯ ಬದಲಾಗಿ). ಈಗ ಮತ್ತೆ ಓದಿ ನಿಮ್ಮಲ್ಲಿನ ಗುಣಗಳು ಮತ್ತು ಸಂಬಂಧಗಳ ಬಗ್ಗೆ.
2. ನಿಮ್ಮಲ್ಲಿರುವ ಏನನ್ನು ಬದಲಾಗಬೇಕಂದು ಇಚ್ಛಿಸುತ್ತಿರಿ ?

ಎಫೆಸ 4 : 29

1. ಯಾವ ತರಹವಾದ ಮಾತುಗಳು ಇತರರಿಗೆ ಹಾನಿಕರವಾಗಿವೆ ?
2. ನೀವು ಕರುಣೆ ಇಲ್ಲದ ಅಪವಾದಕರವೂ, ಹಾಸ್ಯಕರವೂ ಆದ ಮಾತುಗಳಲ್ಲಿ ಭಾಗಿಯಾಗಿದ್ದೀರೋ ?

1ಥೆಸಲೋನಿಕ .5 : 12-15

1. ನಿಮ್ಮ ಜೀವನದಲ್ಲಿ ನಿಮ್ಮ ಮೇಲ್ವಿಚಾರಕರು ಯಾರಿದ್ದಾರೆ ?
2. ಇದು ಅವರ ಜೀವನ ಯಾವ ರೀತಿ ಇದೆ ಎಂಬುದರ ಮೇಲೆ ಆಧಾರಗೊಂಡಿದೆಯೋ ?
3. ನಿಮ್ಮಲ್ಲಿ ಬಹಳಷ್ಟು ಕಷ್ಟಪಟ್ಟು ಕೆಲಸ ಮಾಡುವ ಶಿಷ್ಯರ ಹೆಸರನ್ನು ಬರೆಯಿರಿ ನೀವು ನಿಮ್ಮ ಪೂರ್ಣ ಹೃದಯದಿಂದ ಅವರಿಗೆ ಮರ್ಯಾದೆ ಕೊಡುತ್ತೀರೋ ?
4. ನಿಮ್ಮಲ್ಲಿ, ಬಲಹೀನತೆಯಿಂದಿರುವ ಕಲಿಯಲು ನಿಧಾನಿಸುವ ಶಿಷ್ಯರ ಬಗ್ಗೆ ಹೇಗೆ ಅನ್ನಿಸುತ್ತದೆ ?

ಅನ್ವಯ :

ನೀವು ಗೌರವಿಸುವ ಕೆಲವರಿಗೆ ಒಂದು ಒಳ್ಳೆಯ ಸಂದೇಶವನ್ನು ಬರೆಯಿರಿ. ನಿಮ್ಮ ಕ್ರಿಸ್ತೀಯ ಜೀವನದಲ್ಲಿ ಮೇಲ್ವಿಚಾರಕರಾದವರಿಗೆ ಮತ್ತು ಯಾರಿಗೆ ಉತ್ತೇಜನ ಬೇಕಾಗಿದೆಯೋ ಅವರಿಗೆ ಇದನ್ನು ಮಾಡಿರಿ.

Scanned with CamScanner

## ದಿನ ಇಪ್ಪತ್ತೆಂಟು :

# "ವಿವಾದಾತ್ಮಕವಾದ ವಿಷಯಗಳು"

ರೋಮಾ. 14 : 1-8

1. ಕ್ರೈಸ್ತರ ನಡುವೆ ಇರುವ ಕೆಲವು ವಿವಾದಾತ್ಮಕ ವಿಷಯಗಳ ಬಗ್ಗೆ ಬರೆಯಿರಿ. ( ಉಡಿಗೆ-ತೊಡಿಗೆ, ವಾದ್ಯಗಳು, ಊಟ ಮತ್ತು ಪಾನ)
2. ವ್ಯತ್ಯಾಸವಾಗುವ ವಿಷಯಗಳಲ್ಲಿ ನಿಮ್ಮ ಅನಿಸಿಕೆ ಹೇಗಿರಬೇಕು ?

ರೋಮಾ 14 : 16-23

1. ದೇವರು ಏನನ್ನು ಹೆಚ್ಚಾಗಿ ಆಶಿಸುತ್ತಾನೆ ?
2. ನೀವು ಇತರರಿಗೆ ತಡೆಯನ್ನುಂಟು ಮಾಡುವ ಏನಾದರೂ ಸಂಗತಿಗಳನ್ನು ಮಾಡಿದ್ದೀರೋ ?
3. ವಚನ 23ರ ಅರ್ಥವೇನು ?
4. ನೀವು ಜೀವಿಸುವ ರೀತಿ ನಿಮಗೆ ಸಂತೋಷವನ್ನು ತರುತ್ತದೆಯೋ ?

1 ತಿಮೊಥೆ.2 : 2-10 :1 ಪೇತ್ರ.3:3

1. ಯಾವುದು ಸ್ತ್ರೀಯನ್ನು ದೇವರ ದೃಷ್ಟಿಗೆ ಸುಂದರವಾಗಿ ಮಾಡುತ್ತದೆ ?
2. ನಿಮ್ಮ ಸ್ವಂತವಾಕ್ಯಗಳಲ್ಲಿ ಈ ವಾಕ್ಯಗಳನ್ನು ಏನು ಹೇಳುತ್ತವೆ ಎಂದು ಬರೆಯಿರಿ. ಅವುಗಳ ದೂರದೃಷ್ಟಿಯೋ ಅಥವಾ ಆಧ್ಯಾತ್ಮಿಕತೆಯೋ ?

ಮತ್ತಾಯ 11 : 18-19

1. ಜನರು ಯಾಕೆ ಸ್ನಾನಿಕನಾದ ಯೋಹಾನ ಮತ್ತು ಯೇಸುವನ್ನು ಟೀಕಿಸಿದರು ?
2. ಇಬ್ಬರು ಭಿನ್ನವಾಗಿದ್ದರೂ ಸಹ ಯಾಕೆ ಅವರು ದೇವರನ್ನು ಮೆಚ್ಚಿಸಿದರು ?

ಅನ್ವಯ :

ಕ್ರೈಸ್ತರಿಗೆ ಯಾವುದು ಸರಿ ಯಾವುದು ಸತ್ಯವೆಂಬುದರ ಬಗ್ಗೆ ನಿಮ್ಮಲ್ಲಿ ಅಪ ನಂಬಿಕೆ ಇದೆಯೋ ? ಅವುಗಳು ವಿವಾದಾತ್ಮಕ ವಿಷಯಗಳು ಎಂಬುದಾಗಿ ಹಿರಿಯ ಕ್ರೈಸ್ತರೊಡನೆ ಆಲೋಚಿಸಿರಿ.

Scanned with CamScanner

## ದಿನ ಇಪ್ಪತ್ತೊಂಬತ್ತು :

## "ಯೇಸುವು ತಿರಿಗಿ ಬೇಗನೆ ಬರುತ್ತಾನೆ "

2 ಪೇತ್ರ.3:3-14

1. ಯೇಸು ಕ್ರಿಸ್ತನ ಎರಡನೇ ಬರುವಿಕೆಯನ್ನು ಯಾಕೆ ಜನರು ಅಪಹಾಸ್ಯ ಮಾಡುತ್ತಾರೆ?

2. 'ದೇವರ ದಿನವು 'ಹೇಗಿರುತ್ತದೆ ?

3. ಯೇಸುವು ಈ ದಿನ ಬರುವುದಾಗಿದ್ದರೇ ನೀನು ಸಿದ್ಧನಿದ್ದೀಯೋ ?

1 ಥೆಸಲೋನಿಕ.4 : 13-18

1. ಈ ವಾಕ್ಯವನ್ನು 2ಪೇತ್ರ.3 : 7-10ಕ್ಕೆ ಹೋಲಿಸಿ ನೋಡಿರಿ. ದೇವರನ್ನು ಸಂದಿಸುವುದಕ್ಕೆ ಸಿದ್ಧರಿಲ್ಲದವರಿಗೆ ಅಲ್ಲಿ ಏನಾದರೂ ಎರಡನೆ ಅವಕಾಶವಿರುತ್ತದೆಯೋ ?

2. ಆ ದಿನವು ಯಾಕೆ ಕಳ್ಳನು ಬರುವ ರೀತಿಯಲ್ಲಿರುತ್ತದೆ ?

3. ಸಿದ್ಧರಾಗಿ ತಯಾರಾಗಿ ಇರುವುದರ ಅರ್ಥವೇನು ?

2 ತಿಮೊಥೆ. 4 : 6-8

1. ಪೌಲನಿಗೂ ನ್ಯಾಯತೀರ್ಪಿನ ದಿನವನ್ನು ಎದುರಿಸಲು ಹೇಗನ್ನಿಸುತ್ತಿತ್ತು ?

2. ಯೇಸುವಿಗಾಗಿ ಜೀವಿಸುವುದು ಎಂದರೆ ಒಳ್ಳೆಯ ಯುದ್ಧ ಮಾಡಿದರೆ ಸಾಕೆ ?

3. ಈ ರೀತಿಗುಲ್ಲಿ ಕೊನೆಯವರೆಗೂ ಇರುವುದಕ್ಕೆ ಎಂತಹ ಪ್ರಯತ್ನ ಬೇಕು ?

ಅನ್ವಯ :

ಪ್ರತಿದಿನ ಕಡೇಯ ದಿನವೆಂದು ತಿಳಿದು ಜೀವಿಸು.

Scanned with CamScanner

# ದಿನ ಮೂವತ್ತು : "ಪ್ರೀತಿಯಿಂದ ಜೊತೆಗೂಡುವಿಕೆ"

**ಕೀರ್ತನೆ 133 : 1-3**

1. ಸಭೆಗಳಲ್ಲಿ ಯಾವ ರೀತಿಯ ಹೊಂದಾಣಿಕೆಯ ಮುಖ್ಯವೆಂದು ತಿಳಿಯುತ್ತೀರಿ ?

**ಎಫೆಸ 4 : 1-3**

1. 2ನೇ ವಚನವನ್ನು ನಿಮ್ಮ ಸ್ವಂತ ಮಾತುಗಳಲ್ಲಿ ಹೇಳಿರಿ. ಇದಕ್ಕೆ ವಿರುದ್ಧವಾಗಿ ನಡೆದಾಗ ಏನಾಗುತ್ತದೆ ?
2. ಹೊಂದಾಣಿಕೆಯಿಂದಿರಲು ಎಂತಹ ಪ್ರಯತ್ನವನ್ನು ಮಾಡಬೇಕು ?

**ಫಿಲಿಪ್ಪಿ 2 : 1-5**

1. ಒಂದೇ ಆತ್ಮದಲ್ಲಿ ಮತ್ತು ಉದ್ದೇಶದಲ್ಲಿ ಇರಬೇಕೆಂಬುದರ ಅರ್ಥವೇನು?
2. ನೀವು ಇತರರನ್ನು ನಿಮಗಿಂತ ಹೆಚ್ಚೆಂದು ಹೇಗೆ ಬಾವಿಸಬಹುದು?
3. ನಿಮ್ಮ ಸ್ವಂತತನದಿಂದ ಬಿಟ್ಟು ಯಾವ ಇತರರಿಗಾಗಿ ಹಿತಚಿಂತಿಸುತ್ತೀರಿ ? ಯೇಸುವಿನ ಅನಿಸಿಕೆ ಏನು ? ನಿಮ್ಮದೂ ಸಹ ಅದೇ ರೀತಿಯಲ್ಲಿ ಇದೆಯೋ ?

**ಮತ್ತಾಯ 18, 15-17, 5: 23-24**

1. ಇತರರೊಡನೆ ವ್ಯಾಜ್ಯಗಳನ್ನು, ಜಗಳಗಳನ್ನು ಹೇಗೆ ಬಗೆಹರಿಸಿಕೊಳ್ಳಬೇಕೆಂದು ಯೇಸು ಹೇಳುತ್ತಾನೆ ?
2. ನೀವೂ ಯಾರ ಹತ್ತಿರ ಮೊದಲು ಹೋಗಬೇಕು ?
3. ಸಭೆಯಲ್ಲಿ ಯಾರೊಂದಿಗಾದರೂ ನೀವು ನಿಮ್ಮ ಮನಸ್ತಾಪವನ್ನು ಬಗೆಹರಿಸಿ ಕೊಳ್ಳಬೇಕಾ ?.

**ಅನ್ವಯ :**

ನಿಮ್ಮ ಸಂಬಂಧವನ್ನು ಈ ದಿನ ಪರೀಕ್ಷೀಸಿಕೊಳ್ಳಿ, ಎಲ್ಲಾ ಸಹೋದರ ಸಹೋದರಿಯರೊಂದಿಗೆ ಹೊಂದಾಣಿಕೆಯಿಂದಿರುವಲ್ಲಿ ಈ ದಿನ ಪ್ರಯತ್ನಿಸಿರಿ. ಯೇಸುವಿನ ಹಾಗೆ ಪ್ರೀತಿ ಮಾಡದವರೊಂದಿಗೆ ಈ ದಿನ ಸಮಯವನ್ನು ಕಳೆಯಿರಿ.



Scanned with CamScanner

# ದಿನ ಮುವತ್ತೊಂದು : "ಅಧೈರ್ಯದ ಕುರಿತು ವಿಚಾರ"

{ ಪ್ರವಾದಿಯಾದ ಎಲೀಯನು ದೇವರೊಂದಿಗೆ ಅದ್ಭುತ, ಜಯಪ್ರದ ಜೀವಿತದ ಅನುಭವವನ್ನು ತಿಳಿಸುತ್ತಾನೆ. ಎಲೀಯನ ಬಲವಾದ ಪ್ರಾರ್ಥನೆಯಿಂದಾಗಿ ಮೂರುವರೆ ವರ್ಷ ಬರಗಾಲ ಕಳೆದ ಮೇಲೆ ಮಳೆ ಬೀಳುವದು ಮತ್ತು 450 ಸುಳ್ಳು ಪ್ರವಾದಿಗಳನ್ನು ನಾಶ ಮಾಡಿದ್ದನ್ನು ತಿಳಿದುಕೊಳ್ಳಲು ಸಾಧ್ಯ. }

1 ಅರಸು19 : 1-18

1. ಯಾಕೆ ಎಲೀಯನು ಬಹಳ ಬಲಗುಂದಿ, ಕಳವಳಗೊಂಡನು?

2. ಯಾವ ಸಂಗತಿಗಳು ನಿಮ್ಮಿಂದ ದೂರವಿರಬೇಕೆಂದು ಆಶಿಸುತ್ತೀರಿ?

3. ಯಾವ ರೀತಿಯಾಗಿ ದೇವರು ಎಲೀಯನನ್ನು ಭಾವನಾತ್ಮಕವಾಗಿ, ಶಾರೀರಿಕವಾಗಿ ಮತ್ತು ಆತ್ಮಿಕವಾಗಿ ಬಲಪಡಿಸಿದನು?

4. ನೀವು ಕಳೆ ಕುಂದಿದಾಗ ಸ್ವಾಭಾವಿಕವಾಗಿ ಏನು ಮಾಡುತ್ತೀರಿ?

5 ಶೋಧಿಸಲ್ಪಟ್ಟು ಅಧೈರ್ಯಪಟ್ಟಾಗ-ಮೇಲಿನ ಮೂರು ಪಾಠಗಳನ್ನು ನಿಮ್ಮ ಜೀವಿತಕ್ಕೆ ಯಾವ ರೀತಿಯಲ್ಲಿ ಅಳವಡಿಸಿಕೊಳ್ಳುತ್ತೀರಿ?

1 ಅರಸು. 19 : 19-21

1. ಎಲೀಷನಿಗೆ ಗೆಳೆತನ ಮತ್ತು ಶಿಷ್ಯತ್ವವನ್ನು ಎಲೀಯನು ಕೊಡುವುದರ ಬಗ್ಗೆ ನಿಮ್ಮ ಅನಿಸಿಕೆಯೇನು? ಎಲೀಷನನ್ನು ಕಳುಹಿಸುವುದಕ್ಕಿಂತ ಮುಂಚಿತವಾಗಿ ದೇವರು ಎಲೀಯನನ್ನು ಕಾರ್ಯಪ್ರವರ್ತಿಕನನ್ನಾಗಿ ಯಾಕೆ ಮಾಡಿದನು?

ಅನ್ವಯ :

ಇಂದು ಅಧೈರ್ಯವು ಬಂದಾಗ ಯಾವ ರೀತಿಯಾಗಿ ವರ್ತಿಸುತ್ತೀರಿ? ಬೇರೆಯವರ ಮೂಲಕ ಕಲಿಯಬೇಕಾದದ್ದನ್ನು ಹೇಗೆ ಹಂಚಿಕೊಳ್ಳುತ್ತೀರಿ?

Scanned with CamScanner

# ದಿನ ಮೂವತ್ತೆರಡು : "ಕ್ರಿಸ್ತನು ನಡೆದ ದಾರಿಯಲ್ಲಿ"

1 ಯೋಹಾನ 2 : 5-6

1. ಹಿಂದಿನ ದಿನಗಳನ್ನು ವಿಚಾರಿಸಿಕೊಳ್ಳಿರಿ. ನೀವು ಸಹ ಕ್ರಿಸ್ತನಂತೆ ನಡೆಯುತ್ತೀರಾ?

ಮಾರ್ಕ 1 : 21-28

1. ಕ್ರಿಸ್ತನ ಉಪದೇಶದಲ್ಲಿ ಏನು ವ್ಯತ್ಯಾಸವಿದೆ?
2. ನೀವು ಬೇರೆಯವರಿಗೆ ಅಧಿಕಾರದಿಂದ ಕಲಿಸುತ್ತೀರಾ?

ಮಾರ್ಕ 1 : 29-34

1. ಕ್ರಿಸ್ತನು ರಾತ್ರಿಯವರೆಗೆ ಕೆಲಸವನ್ನು ಮಾಡುತ್ತಿದ್ದನು ಎಂಬುದರಲ್ಲಿ ನೀವು ಈ ವಿಷಯವಾಗಿ ಯೋಚಿಸುತ್ತೀರಾ?
2. ನೀವು, ಆತನು ಬಳಲಿದ್ದನು ಎಂಬುದಾಗಿ ಯೋಚಿಸುತ್ತೀರಾ?
3. ಆತನು ಯಾಕೆ ಅತಿ ಶ್ರಮವಹಿಸಿ ಕೆಲಸವನ್ನು ಮಾಡಿದನು?
4. ಯೇಸು ಕ್ರಿಸ್ತನ ವಿಷಯವಾಗಿ ಇತರರಿಗೆ ತಿಳಿಸುವ ಆಹ್ವಾನದಲ್ಲಿ ನಿನ್ನನ್ನು ನೀನು ಕ್ರಿಸ್ತಗನ ಸೇವೆಗೆ ತೊಡಗಿಸಿಕೊಳ್ಳುತ್ತಿಯೋ?

ಮಾರ್ಕ 1, 35

1. ಪ್ರತಿದಿನ ಬೆಳಿಗ್ಗೆ ಯೇಸುಕ್ರಿಸ್ತನು ಎದ್ದು ಏನು ಮಾಡುತ್ತಿದ್ದನೆಂಬುವುದನ್ನು ತಿಳಿದಿದ್ದೀರಿ? ಆತನು ಹಾಗೆ ಏಕೆ ಮಾಡುತ್ತಿದ್ದನು?
2. ಯೇಸುವಿನಂತೆ ಎಷ್ಟು ಜನರು ಪ್ರಾರ್ಥಿಸಲು ಸಿದ್ಧರಿದ್ದೀರಿ?

ಮಾರ್ಕ 2, 13-17

1. ಎಂಥ ಪ್ರಕಾರದ ಜನರನ್ನು ಯೇಸುಸ್ವಾಮಿಯು ಮಿತ್ರರನ್ನಾಗಿ ಮಾಡಿಕೊಂಡನು? ಯಾಕೆ?
2. ಅನ್ಯರನ್ನು ಮತ್ತು ಪಾಪಿಗಳನ್ನು ನೀವು ಹೇಗೆ ನೋಡಿಕೊಳ್ಳುತ್ತೀರಿ?
2. ನೀವು ಹೊಸ ಮಿತ್ರರೊಡನೆ ಸುವಾರ್ತೆಯನ್ನು ಹೇಗೆ ಹಂಚಿಕೊಳ್ಳುತ್ತೀರಿ?

ಅನ್ವಯ :

ಕ್ರಿಸ್ತನ ಮಾದರಿಯಂತೆ. ಇಂದಿನ ಸತ್ಯವೇದ ಅಧ್ಯಾಯನದಿಂದ ಎರಡು ವಿಷಯಗಳನ್ನು ಬರೆಯಿರಿ ಮತ್ತು ಅದರಂತೆ ಮಾಡಿರಿ.



Scanned with CamScanner

## ದಿನ ಮುವತ್ಮೂರು :

# "ಜ್ಯೋತಿರ್ಮಂಡಲಗಳಂತೆ ಹೊಳೆಯುವುದು"

ಫಿಲಿಪ್ಪಿ. 2 : 14-16

1. ಜೀವಕರವಾದ ವಾಕ್ಯಗಳನ್ನು ಬೇರೆಯವರಿಗೆ ಹೇಗೆ ಹಂಚುತ್ತೀರಿ ?
2. ಸುತ್ತಮುತ್ತಲಿನ ಜನರಿಗೆ ಯಾವ ರೀತಿಯಾಗಿ ಮಾದರಿಯನ್ನು ತೋರಿಸುತ್ತೀರಿ ?

1 ಕೊರಿಂಥ. 9 : 19-23

1. ಪ್ರತಿಯೊಬ್ಬರಿಗೂ ಹೇಗೆ ಗುಲಾಮರಾಗುತ್ತೀರಿ ?
2. ಬೇರೆಯವರು ರಕ್ಷಿಸಲ್ಪಡಬೇಕು ಎಂಬ ವಿಷಯದ ಕುರಿತು ಯಾವ ಮಾರ್ಗಗಳನ್ನು ಅನುಸರಿಸುತ್ತೀರಿ ?

ಕೀರ್ತನೆಗಳು 126 : 6

1. ಶಿಷ್ಯರನ್ನಾಗಿ ಮಾಡಲು ಯಾವ ರೀತಿ ಬೆಳೆಯನ್ನು ಬೆಳೆಯಬೇಕು ?
2. ಅದರಂತೆ ಮಾಡಿದವರಿಗೆ ಯಾವ ವಾಗ್ದಾನಗಳು ಸಿಗುತ್ತವೆ ?

ದಾನಿಯೇಲ 12 : 3

ನೀವು ಜ್ಞಾನಿಗಳಾಗಿದ್ದೀರಾ ?

ಅನ್ವಯ :

ನಂಬಿಕೆಯಿಂದ ನಿಜವಾಗಿ ಆಳವಾಗಿ ಪ್ರೀತಿಸುವ ಜನರಿಗೋಸ್ಕರ ಹೃದಯಪೂರ್ವಕವಾಗಿ ಪ್ರಾರ್ಥಿಸಿರಿ.

Scanned with CamScanner

# ದಿನ ಮೂವತ್ನಾಲ್ಕು : "ಸರಿಪಡಿಸಿಕೊಳ್ಳುವಿಕೆ"

ಗಲಾತ್ಯ 2 : 11-16

1. ಪೇತ್ರನ ಪಾಪ ಏನಾಗಿತ್ತು ?

2. ಪೌಲನು ಜನರನ್ನು ಹೇಗೆ ಸರಿಪಡಿಸಿದನು ?

(1 ತಿಮೊಥೆ 5 : 20, ಮತ್ತಾಯ 18 : 15 ನೋಡಿರಿ ).

2ಕೊರಿಂಥ 7 : 8-13

1. ಪೌಲನು ಕೊರಿಂಥದವರನ್ನು ಯಾವ ಉದ್ದೇಶದಿಂದ ಸರಿಪಡಿಸಲು ಆಹ್ವಾನಿಸುತ್ತಾನೆ.

2. ದೇವರು ನಿಮ್ಮನ್ನು ಸರಿಪಡಿಸಿದಾಗ ನೀವು ಹೇಗೆ ಪ್ರತಿಕ್ರಿಯಿಸಬೇಕೆಂದು ಅಪೇಕ್ಷಿಸುತ್ತಾನೆ ?

3. ಯಾರಾದರೂ ನಿಮ್ಮನ್ನು ಇತ್ತೀಚೆಗೆ ಸರಿಪಡಿಸಿದ್ದಾರೋ ?

4. ಅವರು ನಿಮ್ಮನ್ನು ಎಳ್ಳಿ ಪ್ರೋತ್ಸಾಹಿಸುವ ಪ್ರತಿಕ್ರಿಯೆ ತೋರಿಸಿದ್ದಾರ ?

ಗಲಾತ್ಯ 6 : 1-5

1. ಒಬ್ಬರಿಗೊಬ್ಬರೂ ಸಹಾಯ ಮಾಡುವದರಲ್ಲಿ ಏನಾದರೂ ಅಭ್ಯಂತರವಿರುತ್ತದೆಯೋ ?

2. ಅಹಂಭಾವವು ನಿಮ್ಮನ್ನು ಸರಿಪಡಿಸಲು ಹೇಗೆ ಅಡ್ಡಿ ಬರುತ್ತದೆ ?

3. ಬೇರೆಯವರೊಂದಿಗೆ ನಮ್ಮನ್ನು ಸರಿಗಟ್ಟಿಸಿಕೊಳ್ಳುವದರಿಂದ ಅಪಾಯವು ಯಾಕೆ ಬರುತ್ತದೆ ?

ಜ್ಞಾನೋಕ್ತಿ 15 : 31-32, 16 : 18

1. ನಿಮ್ಮ ಕುರಿತು ಯಾವುದು ವರ್ಣಿಸುತ್ತದೆ ?

ಅನ್ವಯ :

ನೀವು ತಿದ್ದುವಿಕೆಯನ್ನು ಹೇಗೆ ಸ್ವೀಕರಿಸುತ್ತೀರಿ ಎಂಬ ಕುರಿತು ನಿಮ್ಮನ್ನು ಶಿಷ್ಯತ್ವಕ್ಕೆ ಸಿದ್ಧಪಡಿಸುತ್ತಿರುವವರನ್ನು ಕೇಳಿರಿ. ನೀವು ಪಶ್ಚಾತ್ತಾಪ ಪಡಬೇಕಾಗಿದೆಯೋ?



Scanned with CamScan

# ದಿನ ಮುವತ್ತೈದು : "ಯೋಗ್ಯವಾದ ಹೆಸರು"

1 ಪೇತ್ರ 4 : 12-19)

1. ಕ್ರಿಸ್ತನಿಗೋಸ್ಕರವಾಗಿ ಯಾವ ತರಹದ ನಿಂದೆ ಮತ್ತು ಅಪಮಾನವನ್ನು ಅನುಭವಿಸುವಿರಿ?

2. ನಿಮ್ಮ ಅಭಿಪ್ರಾಯ ಏನಾಗಿದೆ?

3. ನೀವು ಶ್ರಮೆಯನ್ನು ಅನುಭವಿಸುವಾಗ ಸೈತಾನನು ನಿಮ್ಮ ಬಗ್ಗೆ [illegible] [illegible] ಮಾಡುತ್ತಾನೆ?

ಇಬ್ರಿಯ 10 : 32-34

1. ನೀವು ಎಂದಾದರೂ ಇಂಥ ಬಾಧೆಗಳನ್ನು ಅನುಭವಿಸಿದ್ದೀರಾ?

2. ಇಂತಹ ಅಪಮಾನ ಮತ್ತು ಬಾಧೆಗಳನ್ನು ಅನುಭವಿಸುವಂತಹ ಇತರ ಕ್ರೈಸ್ತರಿಗೆ ನೀವು ಉತ್ತೇಜನ ಕೊಡುತ್ತೀರಾ?

ಇಬ್ರಿಯ 11 : 32-40

1. ಕ್ರಿಸ್ತನಿಗೋಸ್ಕರವಾಗಿ ಸಿಂಹ, ಬೆಂಕಿ, ಕತ್ತಿ, [illegible], [illegible], [illegible] ಬೇಡಿ ಕಷ್ಟ, ಸಂಕಟ, ತೊಂದರೆಗಳನ್ನು ಅನುಭವಿಸುತ್ತೀರೋ?

2. ಇಂಥ ಜನರಿಗೋಸ್ಕರ ದೇವರು ಏನು ಮಾಡಿದ್ದಾನೆ?

2 ಕೊರಿಂಥ 11 : 28-29, ರೋಮಾ 8 : 18

1. ಪೌಲನು ಕ್ರಿಸ್ತನಿಗೋಸ್ಕರ ಎಂತಹ ಜೀವಿತವನ್ನು ನಡೆಸಿದನು?

2. ಪೌಲನು ತನ್ನ ಬಾಧೆಗಳನ್ನು ಯಾವ ರೀತಿಯಾಗಿ ಅನುಭವಿಸಿದನು?

3. ಕ್ರೈಸ್ತರಾಗಿ ನೀವು ಎಂದಾದರೂ ಸಂತೋಷಪಟ್ಟಿದ್ದೀರಾ ಅಥವಾ ಗುಣಗುಟ್ಟಿದ್ದೀರಾ?

ಅನ್ವಯ :

"ಕ್ರೈಸ್ತರು" ಎಂಬ ಹೆಸರಿಗೆ ನೀವು ಯೋಗ್ಯರಾಗಿದ್ದೀರಿ ಎಂದು ಯೇಸು ಹೇಳುತ್ತಾನೋ?

Scanned with CamScan

# ದಿನ ಮುವತ್ತಾರು : "ನಿರೀಕ್ಷೆ ಮತ್ತು ಭವಿಷ್ಯ"

1. ನಿಮ್ಮ ಭವಿಷ್ಯಕ್ಕೋಸ್ಕರ ನೀವು ಚಿಂತಿಸುತ್ತೀರಾ?
2. ನಿಮ್ಮ ನಿರೀಕ್ಷೆಗಳೇನು ಮತ್ತು ಭಯಗಳೇನು?

ಯೆರೆಮಿಯ 29 : 11-13

ಸಂಪೂರ್ಣ ಹೃದಯದಿಂದ ದೇವರನ್ನು ಹುಡುಕುವಂತವರಿಗೆ ದೇವರು ಯಾವ ವಾಗ್ದಾನಗಳನ್ನು ಮಾಡುತ್ತಾನೆ.

ಕೀರ್ತನೆ 37 : 3-4

ನಿಮ್ಮ ಹೃದಯದ ಆಶೆಯು ಏನಾಗಿರುತ್ತದೆ ? ದೇವರು ನಿಮಗೆ ಅವುಗಳನ್ನು ಕೊಡುತ್ತಾನೆಂದು ನೀವು ನಂಬುತ್ತೀರೋ?

1 ತಿಮೊಥೆ 6 : 6-10

1. ನಿಮಗೆ ಏನಾಗಬೇಕೆಂದು ಅನಿಸುತ್ತದೆ ?
2. ನಿಮ್ಮ ಜೀವಿತದಲ್ಲಿ ಹಣಕ್ಕೋಸ್ಕರವಾಗಿ ನಿಮ್ಮ ಆಶೆ ಏನಾಗಿದೆ?
3. ಹೇಗೆ ಕೆಲವರು ನಂಬಿಕೆಯಿಂದ ದೂರ ಅಲೆಯುವವರಾಗಿದ್ದಾರೆ?
4. ಬೇರೆ ಯಾವ ಆಶಾ ಆಕಾಂಕ್ಷೆಗಳು ನಮ್ಮನ್ನು ಅಲೆದಾಡುವಂತೆ ಮಾಡುತ್ತವೆ?

ರೋಮಾ 8 : 31-32

ನಿಮಗೋಸ್ಕರ ದೇವರು ತನ್ನ ಪ್ರೀತಿಯನ್ನು ತೋರಿಸುವಂತೆ ಏನು ಮಾಡಿದ್ದಾನೆ?

ಅನ್ವಯ :

ನಿಮ್ಮ ಜೀವಿತದಲ್ಲಿ ಚಿಂತೆ, ಕಳವಳಗಳು ಮತ್ತು ಅಪನಂಬಿಕೆ ಬಂದರೆ ಅವುಗಳಿಗೋಸ್ಕರ ಪಶ್ಚಾತ್ತಾಪ ಪಡಬೇಕು. ದೇವರ ನಂಬಿಗಸ್ತಿಕೆ. ಸತ್ಯವೇದದ ವಾಕ್ಯಗಳನ್ನು ಜ್ಞಾಪಿಸಿಕೊಳ್ಳಬೇಕು.



Scanned with CamScan

## ದಿನ ಮುವತ್ತೇಳು :

# "ಕೃಪೆಯಿಂದ ಮಾಡುವ ದಾನ"

ಲೂಕ 21 : 1-4

1. ವಿಧವೆಯ ಉದಾಹರಣೆಯಿಂದ ನೀವು ಏನನ್ನು ಕಲಿತಿರಿ?

2. ಆಕೆಯು ಜಿಪುಣಳಾಗಿರಬಹುದಾಗಿದ್ದ 3 ಕಾರಣಗಳನ್ನು ಕೊಡಿರಿ?

1 ತಿಮೊಥ 6 : 17-19

1. ದೇವರಿಗೋಸ್ಕರ ನೀವು ಉದಾರ ಮನಸ್ಸಿನಿಂದ ಕೊಡಲು ನಿರ್ಧರಿಸಿದ್ದೀರಾ?

2. ಕ್ರಮವಾಗಿ ಹಣವನ್ನು ಕೊಡುತ್ತೀರಾ?

3. ಉದಾರವಾಗಿ ಕೊಡುವವನಿಗೆ ದೇವರು ಏನನ್ನು ಕೊಡಲು ವಾಗ್ದಾನ ಮಾಡಿದ್ದಾನೆ?

4. ನೀವು ದೇವರಿಗೆ ಮತ್ತು ಬೇರೆಯವರಿಗೆ ಕೊಡುವದರ ದಾನಗಳ ಬಗ್ಗೆ ನಿಮಗೆ ಹೇಗೆ ತೋರುತ್ತದೆ?

ಅನ್ವಯ :

ನೀವು ಕೊಡುವ ಉದಾರ ಹಣವು ಯೋಗ್ಯವಾದ ನಂಬಿಕೆಯಿಂದ ಕೂಡಿದ ಹಣವಾಗಿದೆಯೆಂದು ಆಲೋಚಿಸುತ್ತೀರೋ? ದೇವರಿಗೆ ಕೊಡುವುದರ ಬಗ್ಗೆ ವಾಗ್ದಾನಗಳು ಮತ್ತು ಘನತೆಗಳು ನಿಮಗೆ ವಿಚಾರ ಮಾಡಲು. ನಿರ್ಧರಿಸಲು ಬಿಟ್ಟಿರುತ್ತದೆ.

Scanned with CamScanner

# ದಿನ ಮೂವತ್ತೆರಡು : "ಕ್ರಿಸ್ತನು ನಡೆದ ದಾರಿಯಲ್ಲಿ"

1 ಯೋಹಾನ 2 : 5-6

1. ಹಿಂದಿನ ದಿನಗಳನ್ನು ವಿಚಾರಿಸಿಕೊಳ್ಳಿರಿ, ನೀವು ಸಹ ಕ್ರಿಸ್ತನಂತೆ ನಡೆಯುತ್ತೀರಾ?

ಮಾರ್ಕ 1 : 21-28

1. ಕ್ರಿಸ್ತನ ಉಪದೇಶದಲ್ಲಿ ಏನು ವ್ಯತ್ಯಾಸವಿದೆ?
2. ನೀವು ಬೇರೆಯವರಿಗೆ ಅಧಿಕಾರದಿಂದ ಕಲಿಸುತ್ತೀರಾ?

ಮಾರ್ಕ 1 : 29-34

1. ಕ್ರಿಸ್ತನು ರಾತ್ರಿಯವರೆಗೆ ಕೆಲಸವನ್ನು ಮಾಡುತ್ತಿದ್ದನು ಎಂಬುದರಲ್ಲಿ ನೀವು ಈ ವಿಷಯವಾಗಿ ಯೋಚಿಸುತ್ತೀರಾ?
2. ನೀವು, ಆತನು ಬಳಲಿದ್ದನು ಎಂಬುದಾಗಿ ಯೋಚಿಸುತ್ತೀರಾ?
3. ಆತನು ಯಾಕೆ ಅತಿ ಶ್ರಮವಹಿಸಿ ಕೆಲಸವನ್ನು ಮಾಡಿದನು?
4. ಯೇಸು ಕ್ರಿಸ್ತನ ವಿಷಯವಾಗಿ ಇತರರಿಗೆ ತಿಳಿಸುವ ಆಹ್ವಾನದಲ್ಲಿ ನಿನ್ನನ್ನು ನೀನು ಕ್ರಿಸ್ತಗನ ಸೇವೆಗೆ ತೊಡಗಿಸಿಕೊಳ್ಳುತ್ತಿಯೋ?

ಮಾರ್ಕ 1, 35

1. ಪ್ರತಿದಿನ ಬೆಳಿಗ್ಗೆ ಯೇಸುಕ್ರಿಸ್ತನು ಎದ್ದು ಏನು ಮಾಡುತ್ತಿದ್ದನೆಂಬುವುದನ್ನು ತಿಳಿದಿದ್ದೀರಿ? ಆತನು ಹಾಗೆ ಏಕೆ ಮಾಡುತ್ತಿದ್ದನು?
2. ಯೇಸುವಿನಂತೆ ಎಷ್ಟು ಜನರು ಪ್ರಾರ್ಥಿಸಲು ಸಿದ್ಧರಿದ್ದೀರಿ?

ಮಾರ್ಕ 2, 13-17

1. ಎಂಥ ಪ್ರಕಾರದ ಜನರನ್ನು ಯೇಸುಸ್ವಾಮಿಯು ಮಿತ್ರರನ್ನಾಗಿ ಮಾಡಿಕೊಂಡನು? ಯಾಕೆ?
2. ಅನ್ಯರನ್ನು ಮತ್ತು ಪಾಪಿಗಳನ್ನು ನೀವು ಹೇಗೆ ನೋಡಿಕೊಳ್ಳುತ್ತೀರಿ?
2. ನೀವು ಹೊಸ ಮಿತ್ರರೊಡನೆ ಸುವಾರ್ತೆಯನ್ನು ಹೇಗೆ ಹಂಚಿಕೊಳ್ಳುತ್ತೀರಿ?

ಅನ್ವಯ :

ಕ್ರಿಸ್ತನ ಮಾದರಿಯಂತೆ. ಇಂದಿನ ಸತ್ಯವೇದ ಅಧ್ಯಾಯನದಿಂದ ಎರಡು ವಿಷಯಗಳನ್ನು ಬರೆಯಿರಿ ಮತ್ತು ಅದರಂತೆ ಮಾಡಿರಿ.



Scanned with CamScan

# ದಿನ ಮುವತ್ತೊಂಬತ್ತು : "ನಂಬಿಕೆಯು ಜನನವಾಗಿದೆ"

ಮಾರ್ಕ 2 : 1-12

1. ಈ ಮನುಷ್ಯನು ಯೇಸುವನ್ನು ನೋಡಲು ಯಾಕೆ ನಿರ್ಧಾರ ಮಾಡಿದನು?
2. ಯೇಸುವನ್ನು ನೋಡಲಾಗದಿರಲು ಕನಿಷ್ಟ 3 ಕಾರಣಗಳನ್ನು ಕೊಡಿರಿ?
3. ಯೇಸುವಿನ ಮೇಲೆ ಆ ಮನುಷ್ಯನ ಬಗ್ಗೆ ಏನು ಪರಿಣಾಮ ಬೀರಿತು?

ಮಾರ್ಕ 5 : 21-43

1. ಯಾಯಿರನು ಮತ್ತು ರಕ್ತಕುಸುಮ ರೋಗಿ ಹೆಣ್ಣು ಮಗಳು, ಇವರಿಬ್ಬರ ನಡುವೆ ಸಾಮಾನ್ಯವಾದ ಸಂಗತಿ ಏನಿತ್ತು?
2. ಯಾಕೆ ಯೇಸುವು ಆ ಇಬ್ಬರಿಗೆ ಸಹಾಯ ಮಾಡಿದನು?
3. ನಮಗೆ ಸಹಾಯವು ಅವಶ್ಯವಾದಾಗ ಕ್ರಿಸ್ತನ ಮೇಲೆ ಪೂರ್ಣವಾಗಿ ಆತುಕೊಳ್ಳಬೇಕು ಏಕೆ?
4. ದೇವರ ಮೇಲೆ ಆತುಕೊಳ್ಳದೇ ಇರುವುದಕ್ಕೆ ಯಾವ ಸಂಗತಿಗಳು, ಮಾರ್ಗಗಳು ಮೂಲವಾಗಿವೆ?
5. ಸಹಾಯಕ್ಕೋಸ್ಕರ ಯಾವುದೇ ಬೇರೆ ಮೂಲಗಳಿಗೆ ನೀವು ತಿರುಗಿದ್ದೀರಾ?

ಮಾರ್ಕ 6 : 1-6

1. ಈ ಸ್ಥಳದಲ್ಲಿ ವ್ಯತ್ಯಾಸವಾದದ್ದು ಏನಿದೆ ? ಯಾಕೆ?
2. ಕ್ರಿಸ್ತನು ನಿಮ್ಮ ನಂಬಿಕೆಯನ್ನು ನೋಡಿ ಇಲ್ಲವೆ ಅಪನಂಬಿಕೆಯನ್ನು ನೋಡಿ ಆಶ್ಚರ್ಯಪಡುತ್ತಾನೋ?

ಇಬ್ರಿಯ 11 : 5-6

ದೇವರನ್ನು ಸಂತುಷ್ಟಿಪಡಿಸಲು ನಂಬಿಕೆಯ ಅವಶ್ಯವಿದೆ ಎಂದು ಯಾಕೆ ವಿಚಾರ ಮಾಡುತ್ತೀರಿ?

ಅನ್ವಯ :

ನಿಮ್ಮ ಜೀವನದಲ್ಲಿ ಅಥವಾ ಇತರರರ ಜೀವನದಲ್ಲಿನ ದೇವರ ಅವಶ್ಯಕತೆಯೇನು?

ಪ್ರಾರ್ಥನೆಯ ಪಟ್ಟಿಯನ್ನು ಸಿದ್ಧಪಡಿಸಿ ಅದಕ್ಕಾಗಿ ಪ್ರಾರ್ಥಿಸಿರಿ.

Scanned with CamScanner

## ದಿನ ನಲ್ವತ್ತು :

# "ಉತ್ತಮ ಹೃದಯಗಳು, ಉತ್ತಮ ಕೃತ್ಯಗಳು, ಉತ್ತಮ ಆಲೋಚನೆಗಳು"

ಲೂಕ 8 : 15

1. ನಿಮಗೆ ಈ ರೀತಿಯ ಹೃದಯವಿದೆಯೋ?
2. ನಿಮ್ಮ ಜೀವಿತವು ಏನನ್ನು ಹುಟ್ಟಿಸುತ್ತದೆ?

ಫಿಲೆಮೋನ 4 : 7

ಯಾವ 3 ಸಂಗತಿಗಳು ಫಿಲೆಮೋನನಿಗೆ ಒಳ್ಳೆಯ ಹೃದಯವಿದೆಯೆಂದು ತೋರಿಸುತ್ತದೆ?

2 ಪೇತ್ರ 1 : 5-11

1. ನೀನು ಕ್ರೈಸ್ತನಾಗಿ ಬೆಳೆಯಲು ನಿನಗೆ ಯಾವುದರ ಅವಶ್ಯಕತೆ ಇದೆ?
2. ಒಳ್ಳೆಯತನ ಸಹೋದರ ಕರುಣೆ ಮತ್ತು ದೃಢತೆಯ ಕುರಿತು ವ್ಯಾಖ್ಯಾನಿಸಿರಿ.
3. ಇದರ ಬೆಳವಣಿಕೆ ನಿಂತರೆ ಆಗಬಹುದಾದ ಪರಿಣಾಮ ಏನು?
4. 10ನೇ ವಚನದ ಅರ್ಥವೇನು?

3 ಯೋಹಾನ 1 : 2-6

1. ಒಬ್ಬ ಸಹೋದರ ಅಥವಾ ಸಹೋದರಿಯು ನಿಮ್ಮನ್ನು ಭೇಟಿಯಾದರೆ ನಿಮ್ಮ ಜೀವಿತದ ಬಗ್ಗೆ ಅವರು ಯಾವ ವರದಿ ನೀಡಬಹುದು?
2. ಇಂದಿನವರೆಗೂ ನಿಮ್ಮ ಜೀವಿತದಲ್ಲಿ ಕ್ರಿಸ್ತನ ಕುರಿತು ಏನನ್ನು ತಿಳಿಯುತ್ತಿದ್ದೀರಿ?
3. ನೀವು ಅಭಿವೃದ್ಧಿ ಹೊಂದುತ್ತಿರುವಿರೋ?
4. ನಿಮಗೆ ಯಾವ ಭಾಗದಲ್ಲಿ ಸಹಾಯದ ಅವಶ್ಯಕತೆ ಇದೆ?

ಅನ್ವಯ :

ಈಗ ನೀವು 40 ದಿನಗಳ ಸತ್ಯವೇದ ಪಾಠಗಳನ್ನು ಕಲಿತಿರಿ. ಮುಂದೆ ಏನು ಕಲಿಯಬೇಕೆಂದು ವಿಚಾರವಿದೆಯೋ? ನೀವು ಕರ್ತನ ಕಡೆಗೆ ನಡೆಸುವ ಜನರೊಟ್ಟಿಗೆ ಈ ವಿಷಯವನ್ನು ಹಂಚಿಕೊಳ್ಳಿರಿ, ಅಭಿವೃದ್ಧಿ ಹೊಂದುತ್ತಾ ಇರಿ.



Scanned with CamScanner